International Journal of Kannada Research
www.kannadajournal.com

ISSN: 2454–5813
IJKR 2023; 9(3): 169-175
© 2023 IJKR
www.kannadajournal.com
Received: 19-06-2023
Accepted: 24-07-2023

**ಡಾ. ಪೂರ್ಣಿಮಾ ಎಸ್**
ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಶೇಷಾದ್ರಿಪುರಂ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಪೂರ್ಣಿಮಾ ಎಸ್**
ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಶೇಷಾದ್ರಿಪುರಂ, ಬೆಂಗಳೂರು, ಕರ್ನಾಟಕ, ಭಾರತ

# ಜೈನಧರ್ಮ ಮತ್ತು ವೀರಶೈವ/ಲಿಂಗಾಯತ ಧರ್ಮಗಳಲ್ಲಿ ಅಹಿಂಸೆಯ ತೌಲನಿಕ ಅವಲೋಕನ

**ಡಾ. ಪೂರ್ಣಿಮಾ ಎಸ್**

**DOI:** https://doi.org/10.22271/24545813.2023.v9.i3c.881

**ಪೀಠಿಕೆ**

'ಕೊಲ್ಲುವ ಧರ್ಮವನೋಯ್ದು ಒಲೆಯೊಳಗಿಕ್ಕುವ; ಕೊಲಲಾಗದ ಜೈನಧರ್ಮವು ಎನ್ನ ತಲೆಯ ಮೇಲಿರಲಿ ಸರ್ವಜ್ಞ" ಎಂದು ವೀರಶೈವ ಕವಿ ಹೇಳಿರುವಂತೆ ಸಮಾಜದ ಏಳಿಗೆಗಾಗಿ ಪ್ರತಿಯೊಂದು ಜೀವ–ಜೀವಿಯ ಕಲ್ಯಾಣಕ್ಕಾಗಿ ಕಾಲಾನುಕ್ರಮದಲ್ಲಿ ಹಲವಾರು ಧರ್ಮಗಳು ಉದಯವಾದವು. ಹಾಗೆ ಉದಯವಾದ ಜಗತ್ತಿನ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಜೈನಧರ್ಮವು ಒಂದು. ಜಿನರಿಂದ ಸ್ಥಾಪಿಸಲ್ಪಟ್ಟ ಜೈನಧರ್ಮದಲ್ಲಿನ ಪಂಚಾಣುವ್ರತಗಳಲ್ಲಿ ಅಹಿಂಸೆಗೆ ಮೊಟ್ಟಮೊದಲ ಸ್ಥಾನ. ಜಗತ್ತಿನಲ್ಲಿರುವ ಯಾವುದೇ ಸೂಕ್ಷ್ಮಾತಿ ಸೂಕ್ಷ್ಮ ಜೀವಕ್ಕೂ ಕೂಡ ಹಿಂಸೆಯಾಗಬಾರದೆಂಬುದು ಜೈನಧರ್ಮದ ಉದ್ದೇಶ. ಜೈನಧರ್ಮವು ಸೇರಿದಂತೆ ಜಗತ್ತಿನ ಎಲ್ಲಾ ಧರ್ಮಗಳು ಸಹ ಅಹಿಂಸೆಯೇ ಶ್ರೇಷ್ಠಧರ್ಮ ಎಂದು ನಂಬಿದ್ದವು. ಆದರೂ ಅಹಿಂಸಾತತ್ವಕ್ಕೆ ಜೈನಧರ್ಮ ಎಲ್ಲಿಲ್ಲದ ಮಹತ್ವದ ಸ್ಥಾನ ಕೊಟ್ಟಿರುವ ಕಾರಣಕ್ಕಾಗಿ ಜೈನಧರ್ಮವನ್ನು "ಅಹಿಂಸಾ ಪರಮೋಧರ್ಮ:, ಅಹಿಂಸಾಪರ ಧರ್ಮ, ಜೀವ ದಯಾಪರ ಧರ್ಮ ಎಂಬುದಾಗಿ ವಿಶೇಷವಾಗಿ ಗುರುತಿಸುತ್ತಾರೆ. ಜೈನದರ್ಮದ ಉಸಿರೇ ಅಹಿಂಸೆ. ಈ ಅಹಿಂಸೆ ಎಂಬ ಮೂಲತತ್ವದ ತಳಹದಿಯ ಮೇಲೆ ಎಲ್ಲಾ ನೈತಿಕ ಸಿದ್ಧಾಂತಗಳು ಅಡಕವಾಗಿರುವುದನ್ನು ಅರಿಯಬಹುದು.

ಜೈನಧರ್ಮ ಮತ್ತು ವೀರಶೈವ ಲಿಂಗಾಯತ ಧರ್ಮಗಳ ತತ್ವ ಸಿದ್ಧಾಂತಗಳಲ್ಲಿ, ಆಚಾರ ವಿಚಾರಗಳಲ್ಲಿ, ಧಾರ್ಮಿಕ ಮತ್ತು ನೈತಿಕ ಮೌಲ್ಯ ಮೊದಲಾದವುಗಳಲ್ಲಿಯೂ ಸಹ ಪರಸ್ಪರ ಅನೇಕ ಹೋಲಿಕೆಗಳನ್ನ ಸಾಮ್ಯತೆಗಳನ್ನ ಜೈನಧರ್ಮ ಮತ್ತು ವೀರಶೈವ ಎರಡು ಧರ್ಮಗಳೂ ಹೊಂದಿದೆ. ಜೈನಧರ್ಮದ ತಳಹದಿ ಕರ್ಮ ಸಿದ್ಧಾಂತವಾದರೆ ವೀರಶೈವ ಲಿಂಗಾಯತ ಧರ್ಮದ ತಳಹದಿ ಕಾಯಕ ಸಿದ್ಧಾಂತ ಕರ್ಮ ಮತ್ತು ಕಾಯಕದ ವಾಚ್ಯಾರ್ಥ ಕೆಲಸ, ಉದ್ಯೋಗ ಎಂಬುದಾಗಿರುವುದನ್ನು ಕಾಣಬಹುದು ಹಾಗೆಯೇ ಜೈನಧರ್ಮ ಅಹಿಂಸೋ ಪರಮೋಧರ್ಮಃ ಎಂದಿರುವುದಕ್ಕನುಗುಣವಾಗಿ ಶರಣ ಧರ್ಮ "ದಯೇ ಧರ್ಮದ ಮೂಲ" ಎನ್ನುತ್ತದೆ.

ಆಂತರಿಕ ಶತ್ರುಗಳಾದ ಕಾಮ, ಕ್ರೋಧ, ಮದ, ಮತ್ಸರ, ಲೋಭ ಮತ್ತು ಮೋಹಗಳನ್ನು ಜೈನಧರ್ಮ 'ಕಷಾಯಗಳು' ಎಂದು ಕರೆದರೆ ಶರಣ ಧರ್ಮ ಅರಿಷಡ್ವರ್ಗಗಳು ಎನ್ನುತ್ತದೆ. ಎರಡು ಧರ್ಮಗಳಲ್ಲೂ ಸಹ ಈ ಕಷಾಯಗಳನ್ನು ಅಥವಾ ಅರಿಷಡ್ವರ್ಗಗಳನ್ನು ದಾಟಿದವನು, ಗೆದ್ದವನು, ಮೀರಿದವನು, ಜಯಿಸಿದವನು, ನಿಗ್ರಹಿಸಿದವನು ಜಿನರಾಗುತ್ತಾರೆಂದು ಜೈನಧರ್ಮದಲ್ಲಿ ಎಂದು ತಿಳಿಸಿದರೆ ವೀರಶೈವ ಲಿಂಗಾಯತ ಧರ್ಮ ಜಂಗಮರಾಗುತ್ತಾರೆಂದು ತಿಳಿಸುತ್ತದೆ.

ಜಗತ್ತಿನಲ್ಲಿರುವ ಯಾವುದೇ ಸೂಕ್ಷ್ಮಾತಿ ಸೂಕ್ಷ್ಮ ಜೀವಕ್ಕೂ ಕೂಡ ಹಿಂಸೆಯಾಗಬಾರದೆಂಬುದು ಜೈನಧರ್ಮದ ಉದ್ದೇಶವಾದರೆ ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿದ ಶರಣ ಧರ್ಮ ಬಸವಣ್ಣನವರ ಧ್ಯೇಯೋದ್ದೇಶದ ಹಾದಿಯಲ್ಲಿ ಎಲ್ಲ ಶಿವಶರಣರು ಸಹ ದಯೆ ಕರುಣೆ ವಾತ್ಸಲ್ಯಗಳನ್ನು ಅಳವಡಿಸಿಕೊಂಡು ಅನುಸರಿಸಿರುವುದನ್ನು ಶರಣರ ವಚನಗಳಿಂದಲೇ ಮನಗಾಣಬಹುದು.

ಬಸವಣ್ಣನವರಂತೆ ಅಕ್ಕಮಹಾದೇವಿಯೂ ಸಹ ಅಹಿಂಸಾ ತತ್ವಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರುವುದನ್ನು ಸಾದರಪಡಿಸುವ ವಚನ:

"ಸಜ್ಜನಳಾಗಿ ಮಜ್ಜನಕ್ಕೆರೆವೆ, ಶಾಂತಳಾಗಿ ಪೂಜೆಯ ಮಾಡುವೆನಯ್ಯ
ಸಮರತಿಯಿಂದ ನಿಮ್ಮ ಹಾಡುವೆನಯ್ಯ
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ ಚನ್ನಮಲ್ಲಿಕಾರ್ಜುನ ದೇವ"

ಎಂಬಲ್ಲಿ ಪೂಜೆ ಮಾಡುವುದರಲ್ಲೂ ಸಹ ಹಿಂಸೆಯ ಭಾವವಿರಬಾರದು ಪ್ರತಿಯೊಂದರಲ್ಲೂ ಅಹಿಂಸೆಯೇ ಮುಖ್ಯವಾಗಿರಬೇಕೆಂಬುದನ್ನು ಅರ್ಥಮಾಡಿಸಿದರೆ;
ಬಸವಣ್ಣನವರು "ಕೊಪಿ ಮಜ್ಜನಕ್ಕೆರೆದರೆ ಮಸೀದಾಯುಧದಗಾಯ, ಪಾಪಿ ಹೂವನೇರಿಸಲು ರಕ್ತದಧಾರೆ" ಎನ್ನುತ್ತಾರೆ. ಅಂದರೆ ಕೋಪಿಷ್ಟನಾದವನು ಲಿಂಗಪೂಜೆಯನ್ನು ಮಾಡಿದರೆ ಮಸೇದ ಆಯುಧದಿಂದ ಲಿಂಗಕ್ಕೆ ಮಾಡಿದ ಗಾಯದಂತೆ ಹಾಗೆಯೇ ಪಾಪಿಯಾದವನು ಲಿಂಗಕ್ಕೆ ಹೂವನೇರಿಸಿದರೆ, ಹೂ ಮುಡಿಸಿದರೆ ಅದು ರಕ್ತಧಾರೆಯಂತೆ ಎಂದಿದ್ದಾರೆ. ಹಾಗಾಗಿ ನಮ್ಮ ಅಂತರಂಗ ಬಹಿರಂಗಗಳ ನಡೆನುಡಿಗಳು ಬಹಳ ಮುಖ್ಯ. ಅವೆರಡು ಶುದ್ಧವಾಗಿದ್ದಾಗ ಮಾತ್ರ ಪ್ರಯೋಜನ. ದ್ವೇಷಾಸೂಯೆಗಳಿಂದ ಹೊರತಾದ ಮುಕ್ತವಾದ ಪೂಜೆ ದೇವರಿಗೆ ಸಲ್ಲುತ್ತದೆ ವಿನಃ ಹಿಂಸಾತ್ಮಕವಾದ ಪೂಜೆ ಸಲ್ಲುವುದಿಲ್ಲ. ಜೈನಧರ್ಮದಲ್ಲಿಯೂ ಸಹ ಮನಸ್ಸಿನ ಭಾವನೆ ಉದ್ದೇಶಾದಿಗಳು ಬಹಳ ಮುಖ್ಯವಾಗಿದ್ದೂ ಜೈನ ಮುನಿಗಳು "ಭಾವನಂ ಭವನಾಶನಂ" ಎಂದು ಹೇಳುತ್ತಾರೆ. ಅಂದರೆ ಜೀವಿಯಾದವನು ಅಂತರಂಗ ಬಹಿರಂಗಗಳಲ್ಲಿ ಶುದ್ಧೋಪಭಾವದಿಂದ ಬಾಳಿ ಬದುಕಿದಾಗ ಅದು ಜೀವಿಯ ಭವಸಾಗರವನ್ನು ದಾಟಿಸಿ ಮುಕ್ತಿಪಥಕ್ಕೊಯ್ಯುತ್ತದೆ.
ಹಾಗೆಯೇ ಕೆಲವರ ಹಿಂಸಾವೃತ್ತಿಯವರನ್ನು ಕಂಡು ಅಕ್ಕಮಹಾದೇವಿಯು "ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ತಂದು ಹಲವು ಪ್ರಾಣಿಯ ತಿನ್ನುವ. ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರುಗುವಂತೆ ಆ ಪ್ರಾಣಿಗಳಿಗೇಕೆ ಮರುಗ ಚೆನ್ನಮಲ್ಲಿಕಾರ್ಜುನ" ಎನ್ನುತ್ತಾಳೆ. ಇದಕ್ಕೆ ಪೂರಕವಾಗಿ ಬಸವಣ್ಣನವರು ಸಹ

"ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೆ ಅಳು, ಕಂಡಾ!
ವೇದವನೋದಿದವರ ಮುಂದೆ ಅಳು, ಕಂಡಾ!
ಶಾಸ್ತ್ರ ಕೇಳಿದವರ ಮುಂದೆ ಅಳು, ಕಂಡಾ!

ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ" ಎಂಬಲ್ಲಿ ಹಿಂಸೆಗೆ ಪ್ರತಿಯಾಗಿ ತಕ್ಕ ಶಿಕ್ಷೆಯನ್ನು ಆ ದೇವರಿಂದ ಅನುಭವಿಸಬೇಕಾಗುತ್ತದೆಂದಿದ್ದಾರೆ.

ಹಾಗೆಯೇ "ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು,
ಕೊಂದಹರೆಂಬುದನರಿಯದೆ
ಬೆಂದ ಒಡಲ ಹೊರೆಯಹೋಯಿತ್ತು.

ಕೊಂದವರುಳಿದರೆ, ಕೂಡಲಸಂಗಮದೇವ" ಎನ್ನುವಲ್ಲಿ ಹಬ್ಬ, ಆಚಾರ ಪದ್ಧತಿಗಳ ಹೆಸರಿನಲ್ಲಿ ತಮ್ಮ ನಾಲಿಗೆ ರುಚಿಗಾಗಿ ಬಾಯಿಚಪಲಕ್ಕಾಗಿ ಬಲಿ ಕೊಟ್ಟು ತಿಂದು ಸಂತಸಪಡುವ ಪ್ರಾಣಿಹಂತಕರು ಶಾಶ್ವತವಾಗಿ ಬದುಕುಲು ಸಾಧ್ಯವೆ? ಎಂಬ ಪ್ರಶ್ನೆಯಲ್ಲಿ ಅಹಿಂಸಾವಾದ ಸಾರ್ವಕಾಲಿಕ ಮಹತ್ವವನ್ನು ತಿಳಿಸುತ್ತಾ; ನುಡಿದಂತೆ ನಡೆಯುತ್ತಾ

"ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಚೆಗೆ, .....
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ!
ಬಳ್ಳದ ಬಾಯಂತೆ ಒಂದೆ ಮನವ ಮಾಡಿ ನಿಲ್ಲೆಂದು ನಿಲಿಸಯ್ಯಾ, ಕೂಡಲಸಂಗಮದೇವ" ಎಂದು ಪ್ರಾರ್ಥಿಸುತ್ತಾರೆ.

ದೇವರ ಹೆಸರಿನಲ್ಲಿ ಆಗುವ ಪ್ರಾಣಿ ಹಿಂಸೆಯನ್ನು ಶರಣರು ಸಂಪೂರ್ಣವಾಗಿ ನಿರ್ನಾಮ ಮಾಡಬಯಸುತ್ತಾರೆ. ಅಲ್ಲದೆ ಜೀವ ನೀಡುವ ಶಕ್ತಿ ನಮಗಿಲ್ಲದಿದ್ದ ಮೇಲೆ ಜೀವ ತೆಗೆಯುವ ಹಕ್ಕೂ ನಮಗಿಲ್ಲ ಅದಕ್ಕಾಗಿ ಬಸವಣ್ಣನವರು "ದಯವಿಲ್ಲದ ಧರ್ಮ ಅದಾವುದಯ್ಯ, ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ" ಎಂದು ಪ್ರಚುರಪಡಿಸುವುದಲ್ಲದೆ

"ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ!
ಕುಲವೇನೋ ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ
ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು!

ವೃತ್ತಿಯಿಂದ ಜಾತಿಯನ್ನು ಪರಿಗಣಿಸಲಾಗದು, ಪ್ರಾಣಿಗಳನ್ನು ಕೊಲ್ಲುವವನೇ ಮಾದಿಗನು, ಮಾಂಸಾದಿ ಇತರ ಹೊಲಸು ಪದಾರ್ಥಗಳನ್ನು ಸೇವಿಸುವವನೇ ಹೊಲೆಯ. ಹೀಗಿರುವಾಗ ಕುಲದ ವಿಚಾರವೆಲ್ಲಿ. ಎಲ್ಲಾ ಸಚರಾಚರ ಪ್ರಾಣಿಗಳಿಗೂ ಲೇಸನ್ನು, ಹಿತವನ್ನು ಬಯಸುವ ಕೂಡಲಸಂಗನ ಶರಣರು ಉತ್ತಮ, ಶ್ರೇಷ್ಠ ಕುಲವೆಂದು ಹೇಳಿದ್ದನ್ನು ಎಲ್ಲಾ ಶರಣರು ಒಪ್ಪಿ ಅಪ್ಪಿಕೊಂಡು ನಡೆದರು.
ಈ ಅಹಿಂಸಾ ಹಾದಿಯಲ್ಲಿ ಅಪೂರ್ವ ದಯಾಗುಣಗಳನ್ನು ಬೆಳೆಸಿಕೊಂಡು ಆಶ್ಚರ್ಯ ಅದ್ಭುತಗಳೆನಿಸುವಷ್ಟು ದಯಾನಿಧಿಯಾದವರು 'ದಸರಯ್ಯ'. ಇವರು ಅಹಿಂಸಾ ತತ್ವದ ನಾಯಕರಾಗಿ "ದಯೆಗೆ ಅರಸನಾದ ಅಯ್ಯಾ 'ದಸರಯ್ಯ' ಎಂಬ ಅನ್ವರ್ಥರೆಂಬಂತೆ ದಸರಯ್ಯನವರೇ ರಚಿಸಿದ 'ಹತ್ತು' ವಚನಗಳನ್ನು ಗಮನಿಸಿದಾಗಲೂ ಮತ್ತು ಇತರ ಶರಣರು ಕವಿಗಳು ದಸರಯ್ಯನ ಬಗ್ಗೆ ತಮ್ಮ ಕಾವ್ಯಗಳಲ್ಲಿ ಉಲ್ಲೇಖಿಸಿ ತಿಳಿಸಿರುವ ವಿಚಾರಗಳಿಂದ ಅರಿಯಬಹುದು.
ಭೀಮಕವಿಯು ತನ್ನ ಬಸವ ಪುರಾಣದಲ್ಲಿ "ಧರಣಿಯೊಳ್ ದಸರಯ್ಯನೊರ್ಬನು

ಪುರಹರನ ಸದ್ಭಕ್ತ ಸಂಯಮಿ
ದುರಿತ ಸಂಸಾರಂ ವಿಶಿಷ್ಟಾಚಾರನತಿಧೀರ
ವಿರಹಿತಾಶಂ ಕಮಳಪಾಶೋತ್ಕರ ವಿನಾಶಂ ವಿಶದ ಕೀರ್ತಿ
ಸ್ಫರಣನಂತಃಕರಣಶುದ್ಧನು ಸಚ್ಚಿದನುಬದ್ಧ(೩೭–೨).

ಧರಣಿಯೊಳು ದಸರಯ್ಯ ಎಂಬ ಪುರಹರನ ಸದ್ಭಕ್ತ ಸಂಯಮಿ ಅಂತಃಕರಣ ಶುದ್ಧನಾಗಿದ್ದನು. ಅವನು ಪುಣ್ಯಜೀವಿ. ಸರ್ವಜೀವಿ ಸದಾ ಕೃಪಾಲೋಕನನು ಅಹಿಂಸಾ ಭಾವಜೀವನು ಆಗಿ ಉತ್ತಮಾಚಾರು ಸುವ್ರತವ್ರತ ಎಂದು ಹೆಸರು ಪಡೆದು ಗುರು–ಲಿಂಗ–ಜಂಗಮ ಪೂಜೆಯನೋಲಿದು ಸುಮುಖ ಭಕ್ತಿಯೊಳು ಆಚರಿಸುತ್ತಿದ್ದನು.
ದಸರಯ್ಯನ ಊರು ರಾಮಗೊಂಡೆ, ದಸರಯ್ಯ ಅಹಿಂಸಾವ್ರತಕ್ಕೆ ನಿಷ್ಠನಾಗಿದ್ದು ವಿವಿಧ ಧರ್ಮಗಳ ಸಾರವನ್ನು ಅರಿತುಕೊಂಡಿದ್ದನು. ಜೈನಧರ್ಮದ 'ಅಹಿಂಸೋಪರಮೋದರ್ಮಃ" ಎಂಬುದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ನುಡಿದಂತೆಯೇ ನಡೆದು ಅದಕ್ಕೆ ಎದುರಾದ ಅಹಿಂಸಾ ಪರೀಕ್ಷೆಗಳಲೆಲ್ಲಾ ಜಯಶಾಲಿಯಾದ ಮಹಾ ಅಹಿಂಸಾ ಯೋಗಿ.

ಪ್ರತಿಯೊಂದು ಧರ್ಮಕ್ಕೂ 'ಆಚಾರಗಳು' ಮತ್ತು 'ವಿಚಾರಗಳು' ಎಂಬ ಎರಡು ಅಡಿಪಾಯಗಳಿರುತ್ತವೆ. ಜೈನಧರ್ಮದ ಆಚಾರಗಳಲ್ಲಿನ ಅನೇಕ ನೀತಿ ಸಂಹಿತೆಗಳಲ್ಲಿ 'ಅಹಿಂಸಾಣು' ವ್ರತವು ಒಂದು. ಇದರಲ್ಲಿ ಉದ್ದೇಶ ಪೂರ್ವಕ ಹಿಂಸೆ ಮತ್ತು ಉದ್ದೇಶ ರಹಿತ ಹಿಂಸೆ ಎಂಬುದಿದೆ ಉದ್ದೇಶ ಪೂರ್ವಕ ಹಿಂಸೆಯಲ್ಲಿ ಯಾವ ಜೀವಿಯೂ ಮತ್ತೊಂದು ಜೀವದ ಹಿಂಸೆಯನ್ನು ತಾನು ಮಾಡಬಾರದು ಮತ್ತು ಮತ್ತೊಬ್ಬರು ಮಾಡಲು ಕಾರಣವಾಗಲಿ, ಪ್ರಚೋದನೆಯಾಗಲಿ ಆಗಬಾರದು. ಅಹಿಂಸೆಯೂ ಮನ, ವಚನ, ಕಾಯ ಸ್ವರೂಪದಲ್ಲಿರಬೇಕು. ಈ ಅಹಿಂಸಾ ವ್ರತಕ್ಕೆ "ಛೇದನ, ಬಂಧನ, ಪೀಡನ, ಅತಿಭಾರಾರೋಹಣ, ಅನ್ನಪಾನನಿರೋಧ" ಎಂಬ ದೋಷಗಳಿವೆ. ಯಾರು ಈ ಅಹಿಂಸಾ ವ್ರತವನ್ನು ಪಾಲಿಸುತ್ತಾರೋ ಅವರು ಯಾವುದೇ ರೀತಿಯ ಪಶು ಪ್ರಾಣಿ ಇತ್ಯಾದಿಗಳನ್ನು ಛೇದನ/ಕತ್ತರಿಸುವಂತಿಲ್ಲ ಹಾಗೂ ಬಂಧನದಲ್ಲಿರಿಸುವಂತಿಲ್ಲ ಮತ್ತು ಪೀಡಿಸುವಂತಿಲ್ಲ. ಮಿತಿ ಮೀರಿದ ಭಾರವನ್ನು ಹೊರಿಸುವಂತಿಲ್ಲ. ಅನ್ನಪಾನ ನಿರೋಧರನ್ನಾಗಿಸುವಂತಿಲ್ಲ.

ದಸರಯ್ಯ ಶರಣನಾದರೂ ಜೈನಧರ್ಮೀಯರಲ್ಲಿನ ಅಹಿಂಸಾಧರ್ಮದ ಪರಾಕಾಷ್ಠತೆಯನ್ನು ದಸರಯ್ಯನಲ್ಲಿ ಕಂಡುಬರುವುದರಿಂದ ದಸರಯ್ಯ ಅಹಿಂಸಾ ವ್ರತಸ್ಥನಾದ ಜೈನ ಸವಣನಂತೆ, ಜೈನ ಸಂನ್ಯಾಸಿಯಂತೆ, ಜೈನ ಕ್ಷಪಣಕನಂತೆ ಕಂಗೊಳಿಸಿದ್ದಾನೆ. ಜೀವ ದಯಾಮಯನಾದ ದಸರಯ್ಯನು ಮನುಕುಲದ ಒಳಿತಿಗಾಗಿ ಸರ್ವಭೂತಹಿತವೆ ಮುಖ್ಯವೆಂದು ಭಾವಿಸಿದ್ದನು. "ಜೀವಿಯ ನೋವೇ ಲಿಂಗದ ನೋವು" ಎಂದು ತಿಳಿದು ಅಹಿಂಸಾವ್ರತವನ್ನೇ ತನು-ಮನ-ವಚನ ಶುದ್ಧತೆಯ ಕಠಿಣ ವ್ರತವಾಗಿ ಸ್ವೀಕರಿಸಿ, ಅದರ ಆಚರಣೆಯಲ್ಲಿ ಬಂದ ಅಡ್ಡಿ ಆತಂಕಗಳಲೇಲ್ಲಾ ಗೆದ್ದು, ಕ್ಷಮೆ, ಶಮೆ, ದಯೆ, ಶಾಂತಿ, ಸದಾಚಾರ, ಸದ್ಭಕ್ತಿ ಸರ್ವ ಪ್ರೀತಿಗಳೇ ದಸರಯ್ಯನ ಉಸಿರಾಗಿದ್ದವು.

ದಸರಯ್ಯನ ಅಹಿಂಸೆ ಸಚರಾಚರಗಳನ್ನೇಲ್ಲಾ ವ್ಯಾಪಿಸಿತ್ತು. ತನ್ನಿಂದ ತರು, ಮರ, ಕ್ರಿಮಿ, ಕೀಟ, ಪಶು-ಪಕ್ಷಿಗಳಾದಿಯಾಗಿ ಯಾವುದಕ್ಕೂ ಹಿಂಸೆಯಾಗಬಾರದೆಂದು ಭಾವಿಸಿದ್ದನು. ದಸರಯ್ಯನು ಅಹಿಂಸಾಯೋಗಿಯೆನಿಸಲು ಕಾರಣವಾದ ಘಟನೆಗಳು ಹಲವಾರು.

ದಸರಯ್ಯನವರ ದಯಾಗುಣವನ್ನು **ಭೀಮಕವಿಯು** ಕೊಂಡಾಡುತ್ತಾ: "ನುಡಿಯಲೇತಕೆ ಫಲವನ್ ನೀ ಒಡೆಯನ್ ಅರಳ್ಗಳದೀ ಹೂವಿನ ಗಿಡುವಿನಲಿ ಕೊಯ್ಯುಲ್ಕೆ ನೊಂದಿತು. ನೊಂದಿತ್ತೆನ್ನುತಾ ಅವಂ ಗಿಡಂ ನೊಯಿಸಿದೊಡಂ ಭಾವಿಸುವಡಿದು ಹಿಂಸೆಯೆನುತಂ". ಹೂವ ಕುಯ್ಯುವುದನ್ನೇ ಬಿಟ್ಟನೆಂದು ವಿವರಿಸಿದ್ದಾರೆ.

ಷಡಕ್ಷರ ಕವಿಯು ಸಹ ದಸರಯ್ಯನ ಸಸ್ಯಾವಳಿಯ ದಯಾಗುಣವನ್ನು ಬಹು ಅಂದವಾಗಿ ಹೇಳಿದ್ದಾರೆ. ಶಿವಪೂಜೆಗೆ ತಡವಾಗುವುದೆಂದು ಆತುರದಲ್ಲಿ ಹೂ ತುಂಬಿದ ಕೊಂಬೆಯನ್ನು ಬಗ್ಗಿಸಿದಾಗ ಅದು ಮುರಿದ ಭಾಗದಲ್ಲಿ ರಕ್ತವೇ ಸುರಿದಂತೆ ಕಂಡು ಝೊರ್ ಎನುತೆ ಪೂ ಗಿಡವ ನೊಂದ ನೊವು ದಸರಯ್ಯನ ಹೃದಯವನ್ನು ತಾಕಿತು. ಆ ಹೂವಿನ ಗಿಡ ನೊಂದು ಸೋರ್ಕೆರೆ ನಡೆ ನೋಡಿ ಕುಸುಮಾವಳಿ ಗೈವ ಕಾಯಕವನ್ನೇ ಬಿಸುಟನು ಎಂಬ ದಸರಯ್ಯನ ದಯಾರಸಭರಿತೆಯನ್ನು ಪ್ರಶಂಸಿದ್ದಾನೆ. ಆ ದುಷ್ಟಾಂತ ಹೀಗಿದೆ;

ಒಮ್ಮೆ ದಸರಯ್ಯನ ಹೂದೋಟದಲ್ಲಿ ಹೂಗಿಡದಿಂದ ಹೂ ಬಿಡಿಸಿಕೊಳ್ಳುತ್ತಿರುವಾಗ ಹೂ ನೊಂದು, 'ಹಾ'! ಎಂದ ಹಾಗಾಯಿತು. ಹೂ ಹಾಗೆ ಅಂದಿರಲು ಸಾಧ್ಯವಾಗಲಿಕ್ಕಿಲ್ಲ, ಆದರೆ ದಸರಯ್ಯನ ಮನೋವೃತ್ತಿ ಹಾಗೂ ಅವನ ಸುಪ್ತ ಚೇತನದಲ್ಲಿ ಹುದುಗಿದ್ದ ದಯಾಪರತೆಯಿಂದಾಗಿ ಅವನ ಮನಸ್ಸಿಗೆ ಹಾಗೆ ಭಾಸವಾಗಿರಬೇಕು. ಅವನ ಕಿವಿಗೆ, ಹೂವು ನೋವಿನಿಂದ 'ಹಾ' ಎಂದಂತೆ ಕೇಳಿಸಿ ಹೂವಿನ ಹೃದಯಕ್ಕೆ ತನ್ನಿಂದ ನೋವಾಯಿತೆಂದು ಹೂವನ್ನು ಬಿಡಿಸಿದ ರೆಂಬೆಯನ್ನು ನೋಡಿದನು. ಅಲ್ಲಿ ಒಸರಿ ತೊಟ್ಟಿಕ್ಕಿದ ರಸ 'ರಕ್ತ'ದಂತೆ ಕಾಣಿಸಿ ದಸರಯ್ಯನ ಮೈನಡುಗಿ, ಕಣ್ಣು ಕತ್ತಲೆಗೂಡಿ, ಹೃದಯ ಝಲ್ಲೆಂದು ವಿಲವಿಲನೆ ಒದ್ದಾಡಿತು. "ಗಿಡ, ಮರ, ಬಳ್ಳಿಗಳಿಂದ ಪೂಜೆಗೆ ಬೇಕಾದ ಹೂಗಳನ್ನು ಬಿಡಿಸಿಕೊಳ್ಳುವುದೇಲ್ಲಾ ಹಿಂಸೆಯೇ ಎಂದೆನಿಸಿ ಅಂದಿನಿಂದ ಹೂಗಳನ್ನು ಕಿತ್ತುಕೊಳ್ಳುವುದಾಗಲಿ, ಹೂಗಳನ್ನು ಹರಿಯುವುದಾಗಲಿ ಬಿಟ್ಟುಬಿಟ್ಟ. ಬದಲಾಗಿ ಹಿಂದಿನ ದಿನವೇ ಸಂಜೆ ಹೂ ಗಿಡಗಳ ಕೆಳಗೆ ಸ್ವಚ್ಛ ಮಾಡಿ, ಸಗಣಿಯಿಂದ ಸಾರಿಸಿ ಗೊಮಯ ಮಾಡಿ ಬರುತ್ತಿದ್ದ. ಮರುದಿನ ಮುಂಜಾನೆ ಹೋಗಿ ತಾವಾಗಿ ತಂಗಾಳಿಗೆ ಉದುರಿಬಿದ್ದ ಹೂಗಳನ್ನೇ ಆಯ್ದು ತಂದು ಲಿಂಗಕ್ಕೆ ಅರ್ಪಿಸಿ ಹೀಗೆ ನಿವೇದಿಸಿಕೊಳ್ಳುತ್ತಿದ್ದ:

> "ಉದುರಿ ಬೀಳುವನ್ನಕ್ಕ ನಿನ್ನ ಹಂಗಯ್ಯ! ಉದುರಿ ಬಿದ್ದ ಬಳಿಕ ಎನ್ನೊಡವೆಯಯ್ಯ ತಂದೆ!...
> ತರು ಲತೆ ಸ್ಥಾವರ ಜೀವಂಗಳೆಲ್ಲ ನಿನ್ನ ಕಾರುಣ್ಯದಿಂದ ಬಗೆದುವು.
> ಆವ ಹರಿದು ಇನ್ನಾರಿಗರ್ಪಿಸುವೆ ತೊಟ್ಟುಬೀಳುವನ್ನಕ್ಕ?" (ವ.ಸಂ.೨,೧)

ತರು, ಲತೆ, ಸ್ಥಾವರ ಸೃಷ್ಠಿಯ ಸಕಲ ಜೀವಗಳೆಲ್ಲ ನಿನ್ನ ಕಾರುಣ್ಯದಿಂದ ಉತ್ಪತ್ತಿಯಾದವು. ಆದ್ದರಿಂದ ಸರ್ವವೂ ನಿನ್ನ ಸೃಷ್ಠಿ ಆಗಿರುವಾಗ ಯಾವುದನ್ನು (ಹೂವನ್ನು) ಕಿತ್ತು ಇನ್ಯಾವುದಕ್ಕೆ (ಲಿಂಗಕ್ಕೆ) ಅರ್ಪಿಸುವುದೇನು, ಆದರೆ ಹೂಗಳೆಲ್ಲಾ ಉದುರಿ ಬೀಳುವವರೆಗೂ ಅವು ನಿನ್ನವು, ಉದುರಿ ಬಿದ್ದ ಬಳಿಕ ನನ್ನವು ತಂದೆ ಎಂದು ದಸರಯ್ಯ ಹೇಳಿಕೊಳ್ಳುತ್ತಿದ್ದ. ಹಾಗೆಯೇ ಬಿದ್ದು ಬಾಡಿದ ಹೂಗಳನ್ನು ಅರ್ಪಿಸಿದುದಕ್ಕಾಗಿ ದಸರೇಶ್ವರ ಲಿಂಗಯ್ಯನೆಲ್ಲಿ ತಪ್ಪು ತಿಳಿದುಕೊಳ್ಳುವನೋ ಎಂದು ಆಲೋಚಿಸಿ;

> "ನಾ ಪೂಜಿಸುವನ್ನಕ್ಕ ನೀ ದೇವ; ಎನ್ನ ಪೂಜೆಗೊಳಗಾದಲ್ಲಿ
> ನೀ ಭಕ್ತ, ನಾ ನಿತ್ಯನಯ್ಯ, ಮರೆಯದಿರು".

ಅಂದರೆ ನಾನು ನಿನ್ನನ್ನು ಪೂಜಿಸುವವರೆಗೂ ನೀನು ದೇವರಷ್ಟೇ. ಬಾಡಿದ ಹೂ ಬೇಡ; ಗಿಡ-ಮರಗಳ ತಾಜಾ ಹೂವೇ ಬೇಕೆಂದು ನೀನು ಬಯಸಿದರೆ ನಿನ್ನಲ್ಲೂ ಆಸೆ ಮೂಡಿ ನೀನು ದೈವತ್ವವನ್ನ ಕಳೆದುಕೊಂಡು ನೀನು ಭಕ್ತನಾಗ್ತೀಯಾ ನಾನು ನಿತ್ಯನಾಗ್ತೀನಿ ನೆನಪಿರಲಿ ಎಂದು ಎಚ್ಚರಿಸುವನು. ಇದಕ್ಕನುಗುಣವಾಗಿ ಅಲ್ಲಮ ಪ್ರಭುಗಳ "ನಾ ದೇವನಲ್ಲದೇ ನೀ ದೇವನೇ? ನಿ ದೇವನಾದಡೆ ನನ್ನನೇಕೆ ಸಲಹೇ?

> ಆರೈದು ಒಂದು ಕುಡಿತೆ ಉದಕವನೆರೆವೆ, ಹಸಿದಾಗ ಒಂದು ತೂತ್ತು ಓಗರವನಿಕ್ಕುವೆ. ನಾ ದೇವ ಕಾಣ ಗುಹೇಶ್ವರ.
> ಹಾಗೆಯೇ
> ದಾಸಿಮಯ್ಯನ ವಚನ; "ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ

ಒಡಲುಗೊಂಡವನೆಂದು ನೀನೆನ್ನ ಜರಿದರೆ ನಿನೊಮ್ಮೆ ಒಡಲುಗೊಂಡು ನೋಡಾ ರಾಮನಾಥ" ಎಂಬಂತಹ ವಚನಗಳಲ್ಲೇಲ್ಲಾ ನೆನಪಿಸುತ್ತದೆ. ಅಂದರೆ ತನ್ನ ಮತ್ತು ದೇವರ ನಡುವೆ ಅಜಗಜಾಂತರ ವ್ಯತ್ಯಾಸವನ್ನು ಮಾಡದೇ ದೇವರೊಡನೆ

ಶರಣರು ಸಂವಾದಿಸುವ ಅಪೂರ್ವ ಶೈಲಿಗಳನ್ನು ಮನವರಿಕೆ ಮಾಡಿಸುತ್ತದೆ.

ದಸರಯ್ಯನಿಗೆ ಶಿವನ ಕಲ್ಯಾಣ ಗುಣಗಳು ನೆನಪಾಗಿ,
"ಸರ್ವದಯಾ ವಸ್ತು ಬೀಜನಲಾ ನೀನು; ಮಲತ್ರಯ ದೂರನೆ
ಸರ್ವಾಂಗ ಸಂತೋಷಿಯೆ, ನಿಗರ್ವಿಯೆ ದಸರೇಶ್ವರ ಲಿಂಗವೇ
ತಥ್ಯ ಮಿಥ್ಯವ ಬಿಟ್ಟೆನಗೆ ಕಾರುಣ್ಯ ಪ್ರಸಾದವ ಕರುಣಿಸಯ್ಯ!"

ಸರ್ವದಯಾ ವಸ್ತುವಿಗೂ ಬೀಜವೆಂದರೆ 'ಮೂಲ'ವಾದವನು ನೀನು. ಮಲತ್ರಯವೆಂದರೆ ಅಣವ ಮಲ, ಮಾಯಾ ಮಲ, ಕಾರ್ಮಿಕ ಮಲ ಎಂಬು ಮೂರು ಮಲಗಳು ಶರೀರದಿಂದ ಸ್ವೇದ/ಬೆವರು, ಮೂತ್ರ ಮತ್ತು ಪುರೀಷ/ಮಲ/ಅಮೇಧ್ಯ/ಕಲ್ಮಷ/ಹೊಲಸುಗಳು ಇಲ್ಲದವನೆ, ಸರ್ವಾಂಗ ಸಂತೋಷಿಯೆ, ನಿಗರ್ವಿಯೆ ದಸರೇಶ್ವರ ಲಿಂಗವೇ ನೀನು ಈ ಸುಳ್ಳು ಸತ್ಯಗಳಿಂದ ಹೊರತಾದ ಕರುಣೆ, ದಯೆ, ಅಂತಃಕರಣ, ಮರುಕಗಳನ್ನು ಅನುಗ್ರಹಿಸೆಂದು ಪ್ರಾರ್ಥಿಸುತ್ತಿದ್ದನು.
ದಸರಯ್ಯನ ದಯಾದೃಷ್ಟಿ ಬರುಬರುತ್ತಾ ವಿಶ್ವವ್ಯಾಪಕವಾಗಿ ಅಹಿಂಸೆ ಅನಂತವಾಗುತ್ತದೆ. ದಾರಿಯಲ್ಲಿ ನಡೆಯುವಾಗ ಕೂಡ ಕ್ರಿಮಿಕೀಟಾದಿಗಳ ಜೀವ ಹತ್ಯೆಯಾದೀತೆಂದು ನಿಧಾನವಾಗಿ ಮೆಲ್ಲನೆ ನಡೆಯುತ್ತಾನೆ. ಮಾತನಾಡುವಾಗ ಅತ್ಯಂತ ಎಚ್ಚರಿಕೆಯಿಂದ ಯಾರ ತನು–ಮನಗಳಿಗೂ ನೋವಾಗದಂತೆ ನುಡಿಯುತ್ತಾನೆ. ಕಣ್ಣಿಗೆ ಕಾಣಿಸದ ಅಗೋಚರ ಜೀವಗಳಿಗೇಲ್ಲಿ ಹಿಂಸೆಯಾಗುವುದೋ ಎಂದು ಕೈ ಬೀಸುವಾಗಲೂ ಜಾಗೃತನಾಗಿರುತ್ತಾನೆ. ಹೀಗೆ ಕುಂತಾಗ, ನಿಂತಾಗ, ಏಳುವಾಗ, ನಡೆಯುವಾಗ, ನುಡಿಯುವಾಗ ಒಟ್ಟಿನಲ್ಲಿ ಉಸಿರಾಡುವಾಗಲೂ ಸಹ ತನ್ನಿಂದ ಯಾರಿಗೂ ಯಾವುದಕ್ಕೂ ಹಿಂಸೆಯಾಗದಂತೆ ಅಹಿಂಸೆಯ ಅಪರಾವತಾರಿಯಾಗಿ ಜೀವಿಸಿದ ಎಂಬಂತ ವಚನ;

"ನುಡಿಯಲ್ಲಿ ಕೆಂಕಲವನರಿದು, ಕರವ ಬೀಸುವಲ್ಲಿ
ತುಷಾರ/(ತಂಪಾದ, ಹಿಮ, ಮಂಜು)
ಕೀಟವನರಿದು, ಅಡಿಯಿಡುವಲ್ಲಿ, ಪೊಡವಿಯಲ್ಲಿ
ಹೊರಹೊಮ್ಮಿದ
ಜೀವ ಚೇತನಾದಿಗಳನರಿದು, ಮತ್ತೆ ನೀಡುವಲ್ಲಿ ಹಿಡಿವಲ್ಲಿ,
ಮತ್ತೊಂದು ಒಡಗೂಡುವಲ್ಲಿ, ಒಡಗೂಡಿ ಬಿಡುವಲ್ಲಿ,
ಸರ್ವದಯಕ್ಕೆ ಮುಡಿಮುಚ್ಚವಿಲ್ಲದಿರಬೇಕು!.

ಇಂತೀ ಸಡಗರದ ಚಿತ್ತ ದಸರೇಶ್ವರ ಲಿಂಗವನೊಡಗೂಡುವ ಭಕ್ತಿ". (ವ.ಸಂ.೨,೫) ಎಂಬುದು ದಸರಯ್ಯನ ವಚನದಲ್ಲಿ ಸುವ್ಯಕ್ತಗೊಂಡಿದೆ.
ಜೈನಧರ್ಮ: ತನ್ನ 'ಆಚಾರ'ದಲ್ಲಿ 'ಅಹಿಂಸೆಗೆ' ಮಹತ್ವ ನೀಡಿದರೆ 'ವಿಚಾರ'ದಲ್ಲಿ 'ಅನೇಕಾಂತವಾದ'ಕ್ಕೆ ಆದ್ಯತೆ ನೀಡುತ್ತದೆ. ಅನೇಕಾಂತವಾದವೆಂದರೆ ಏಕಮುಖ ಆಲೋಚನೆಯನ್ನು ಹೊರತುಪಡಿಸಿ ಸರ್ವಾಧಿಕಾರರಹಿತ ದೃಷ್ಟಿಕೋನದ ಹಲವರ ಹಲವು ದೃಷ್ಟಿಕೋನದ ಸಮಷ್ಠಿ ವಿಚಾರಗಳಿಗೆ ಪ್ರಾಶಸ್ತ್ಯ ನೀಡುತ್ತದೆ. ಹೇಗೆಂದರೆ ನಾನೇ, ನನ್ನದೇ ಸರಿ ಎನ್ನುವುದಕ್ಕಿಂತ ಅನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಹೀಗೂ ಇರಬಹುದೆನ್ನುವಂತ ಸಮದರ್ಶನ ಎಂಬುದು ಅನೇಕಾಂತವಾದವಾಗಿರುತ್ತದೆ. ಇದಕ್ಕೆ ಪೂರಕ ಪ್ರಭಾವ ದಸರಯ್ಯನಲ್ಲಿ ಅಹಿಂಸೆ ಶ್ರದ್ಧೆಯಲ್ಲಿ ಉದ್ಭವಿಸಿದುದು ಮಾತ್ರವಲ್ಲ; ಬುದ್ಧಿಯಲ್ಲಿ ವಿಚಾರದಲ್ಲಿ ಪ್ರಜ್ಞಾಪೂರ್ವಕವಾಗಿ ಬೆಳೆದುದನ್ನು ಸಾದರಪಡಿಸುವ ದಿವ್ಯ ದರ್ಶನದ ವಚನವಿದು;

"ಸರ್ವವನರಿದಲ್ಲಿ, ಸರ್ವಜ್ಞನಾದಲ್ಲಿ, ಇದಿರೆಲ್ಲ ತನ್ನಲ್ಲಿ,
ತಾನೆಲ್ಲ ಇದಿರಲ್ಲಿ! ತನ್ನ ಭಿನ್ನಭಾವ ಅನ್ಯರಲ್ಲಿ ತೋರಿ ಆ ಗುಣ
ತನ್ನನೆ ಅನ್ಯವೆನಿಸುವುದು! ತನ್ನಯ ಶಾಂತಿ ಅನ್ಯರಲ್ಲಿ ತೋರಿ
ಅಲ್ಲಿ ಭಿನ್ನಭಾವವಿಲ್ಲದಿರೆ ಅವರನ್ಯರಲ್ಲ. ಎಮ್ಮವರೆಂಬರು
ಅದು ತನ್ನ ಗುಣ, ಅನ್ಯವಿಲ್ಲ ಎಂಬುದನರಿದಲ್ಲಿ ತನ್ನೊಪ್ಪ
ದರ್ಪಣದಲ್ಲಿ ತೋರುವಂತೆ. ಇದಕ್ಕೆ ಸಂದೇಹವಿಲ್ಲ.
ದಸರೇಶ್ವರ ಲಿಂಗವನರಿವುದಕ್ಕೆ". (ವ.ಸಂ. ೨, ೧೦)

ಈ ಒಂದು ವಚನವನ್ನು ದಸರಯ್ಯ ಬರೆದು ಹೋಗಿದ್ದರೂ ವಚನ ಸಾಹಿತ್ಯದಲ್ಲಿ ಆತನಿಗೊಂದು ಸ್ಥಾನವಿದ್ದೇ ಇರುತ್ತಿತ್ತು. ಇಲ್ಲಿ ಮಾನವತೆಯ ಮೂಲ ಸೂತ್ರವನ್ನೇ ಬಿತ್ತರಿಸಿದ್ದಾನೆ ದಸರಯ್ಯ. ಧ್ವನಿ ಪ್ರತಿಧ್ವನಿಯಂತೆ ದರ್ಪಣದ ಪ್ರತಿಬಿಂಬದಂತೆ ನಾವು ಬೀರಿದ ಭಾವವೇ, ಇತರರಲ್ಲಿ ಭಾವ ಬಿಂಬಿತವಾಗುತ್ತದೆ. ನಾವು ಜೋರುಧ್ವನಿಯಿಂದ ಮಾತಾಡಿದರೆ ಅನ್ಯರೂ ಜೋರಾಗಿ ಮಾತಾಡುತ್ತಾರೆ. ಎಲ್ಲರೂ ತನ್ನವರೆಂದು ತಿಳಿದರೆ ತನ್ನವರಾಗುತ್ತಾರೆ. ಅನ್ಯರೆಂದು ತಿಳಿದರೆ ಅನ್ಯರಾಗುತ್ತಾರೆ. ಮುಖ್ಯವಾಗಿ ಬೇಕಾದುದು ಸಮದರ್ಶನ. ಈ ಸಮದರ್ಶನ ಭಾವ ಸ್ಫುರಿಸಿ ಸಮದರ್ಶನ ಸಿದ್ಧಿಸಿದರೆ ಸಹಜೀವನ ತಾನಾಗಿಯೇ ಮೂಡುತ್ತದೆ. ಈ ಜೈನಧರ್ಮದ ಅನೇಕಾಂತವಾದದ ಆ ಸಮದರ್ಶನವೇ ಮಾನವಾಕಾರದ ದಸರಯ್ಯನಾಗಿ ಹುಟಿರಬೇಕೆನಿಸುತ್ತದೆ.

"ಸರ್ವಮಯ ನಿನ್ನ ಬಿಂಧುವಾದಲ್ಲಿ ಅವುದನಹುದೆಂಬೆ।
ಆವುದನಲ್ಲವೆಂಬೆ!
ಸರ್ವ ಚೈತನ್ಯ ನಿನ್ನ ತಂತ್ರಗಳಿಂದಾಡುವುವಾಗಿ ಆವುದು
ಕಾಯುವೆ? ಇನ್ನಾವುದ ಕೊಲುವೆ?" (ವ.ಸಂ. ೨, ೯)
ಎಂದು ಕೇಳುವ ದಸರಯ್ಯನ ದರ್ಶನ ವಿಶುದ್ಧಿಯನ್ನೇನು
ವರ್ಣಿಸುವುದು?

ಹೀಗೆ ಜೈನಧರ್ಮದ ಉದ್ದೇಶಪೂರ್ವಕ ಹಿಂಸೆಯನ್ನು ಸಂಪೂರ್ಣವಾಗಿ ತಪ್ಪಿಸಿದರೂ ಉದ್ದೇಶರಹಿತ ಹಿಂಸೆಯನ್ನು ಎಷ್ಟು ಎಚ್ಚರದಿಂದ ಪಾಲಿಸಿ ನಡೆದರೂ ಪೂರ್ಣವಾಗಿ ತಪ್ಪಿಸುವುದು ಅಸಾಧ್ಯವಾದುದರಿಂದ ದಸರಯ್ಯ ದುಃಖಿಸುತ್ತಾರೆ. ಹೊರಗಿನ ಜೀವಿಗಳನ್ನು ಹಿಂಸಿಸದೆ ಹೇಗಾದರೂ ಬದುಕಬಹುದು. ಆದರೆ ತನ್ನ ತನುವಿನಲ್ಲಿಯೇ ಹುಟ್ಟಿ, ಶರೀರ ಧರ್ಮದಿಂದ ಸಾಯುವ ಕ್ರಿಮಿ ಜಂತುಗಳ ಹಿಂಸೆಯನ್ನು ಹೋಗಲಾಡಿಸುವುದೇಗೆ? ಎಂದು ದಸರಯ್ಯ ಕಳಕಳಿಸುವ ವಚನ;

"ಎಲು ನರ ಚರ್ಮ ಮಜ್ಜೆಮಾಂಸದೊಳಗಾದ ಕ್ರಿಮಿ
ಎನ್ನಂಗದೊಳು ಹುಟ್ಟಿ,
ಮಲ ಹುಣ್ಣು ಉಗುಳುಗಳಲ್ಲಿ ಬೀಳುವುದ ಕಂಡು ಅವನ್ನು
ನಾ–ರಕ್ಷಿಸಿದೆನೆ?
ಅವು ಬೀಳಬೇಕೆಂದು ನಾ ಶಿಕ್ಷಿಸಿದೆನೆ?
ಇಂತೀ ಜೀವನದ ದೃಷ್ಟವ ಕಂಡು ಎನಗಿದೆತ್ತಣ ಸರ್ವಜೀವ
ದಯೆ?
ಇದರ ಲೇಪವ ಬಿಡಿಸಾ ಚನ್ನದಸರೇಶ್ವರ ಲಿಂಗಾ!" (ವ.ಸಂ. ೨, ೩)

ಎಂದು ದಸರಯ್ಯ ತನ್ನ ಆರಾಧ್ಯ ದೇವರಲ್ಲಿ ಮೊರೆಯಿಡುತ್ತಾರೆ. ಅವರು ಕಂಡ ಜೀವ ದೃಷ್ಟ, ಜೀವನದ ದೃಶ್ಯ ಮತ್ತು ಒಂದು ಜೀವಿ; ಮತ್ತೊಂದು ಜೀವವ ತಿಂದು ಜೀವಿಸುವ ಆಹಾರ ಸರಪಳಿಯ ಜೀವನ ದೃಶ್ಯ, ಖಂಡಿತವಾಗಿಯೂ ಮೈ ನಡುಗಿಸುವಂತಹುದು!.

ಇಂಥ ಹಿಂಸಾಭರಿತ ಜೀವನ ಸಂಗ್ರಾಮದಲ್ಲಿ ನಾನು ಸರ್ವಜೀವ ದಯಾಭರಿತನಾಗಿ ಬದುಕಲಾರೆ. ಹಾಗಾಗಿ ಈ ಹಿಂಸಾಮಯವಾದ ಜೀವನದಿಂದ ತನ್ನನ್ನು ಮುಕ್ತನನ್ನಾಗಿ ಮಾಡು ತಂದೆ ಎಂದು ದೇವರನ್ನು ಬೇಡಿಕೊಳ್ಳುವ ದಸರಯ್ಯನ ದಯಾರ್ದ್ರಣ ಹೃದಯಕ್ಕೆ ಎಂಥವರೂ ನಮಿಸಬೇಕೆನಿಸುತ್ತದೆ!.

ಇಂಥ ಅಹಿಂಸೆಯ ಮೂರ್ತಿಗೂ ಹಿಂಸೆ ತಪ್ಪಲಿಲ್ಲ. ಈ ಕ್ರೂರ ಕುಟಿಲ ಕುಹಕ ಲೋಕದಲ್ಲಿ ದಸರಯ್ಯನ ಅಹಿಂಸೆಯನ್ನು ಒರೆಗೆ ಹಚ್ಚಿ ನೋಡಬೇಕೆಂದು ಕೆಲ ಮಲಿನ ಮತಿಗಳು ಸಿದ್ಧರಾದರು. 'ಸಿದ್ಧರಾದರು' ಎನ್ನುವುದಕ್ಕಿಂತ ಶಿವನೇ ಅವರನ್ನು ಪ್ರಚೋದಿಸಿರಬೇಕು. ಏಕೆಂದರೆ, ಅಹಿಂಸಾವ್ರತದ ಅಪರಾವತಾರಿಯನ್ನು ಸತ್ವ ಪರೀಕ್ಷೆಗೆ ಒಳಪಡಿಸುವುದಕ್ಕಾಗಿ, ದಸರಯ್ಯನ ಊರಾದ ರಾಮಗೊಂಡೆಯಲ್ಲಿ 'ಮೋಟು ಮಲ್ಲುಗ' ಎಂಬ ದುರಾತ್ಮನಿದ್ದನು. ಕಳವು ಮಾಡಿ ಸಿಕ್ಕಿಬಿದ್ದು ಕೈಗಳನ್ನು ಕಡಿಸಿಕೊಂಡು ಮೋಟು ಕೈಗಳನ್ನು ಹೊಂದಿದ್ದರಿಂದಲೇ ಮೋಟು ಮಲ್ಲುಗನೆಂದು ಹೆಸರಾಗಿದ್ದನು.

ಕಾಳುಮೂಲನ ಮಂಡೆಯಂ ನುಣ್ಪೆಳೆ ಬೋಳಿಸಿ
ಮೂಹುರಿಗಳಲಿ ಮೇಳವಿಸಿದ ಉಡಿದಾರವಂ ಬಂಧಿಸಿ
ಯವನ ತಲೆಯ ಮೇಲೆ ಮೋರೆಯೊಳ್ ಒಡಲೊಳ್
ಅಂತದ್ದೂಳಿಸುತ ಜಲಮಿಳಿತ ಭಸಿತವ
ನೋಳಿಯಿಂ ರುದ್ರಾಕ್ಷಿಯಂ ಸ್ಫಟಿಕಂಗಳಂ ಕಟ್ಟಿ (ಸಂ. ೩೭, ೧೪)
ಬಿಳಿಯ ಸೀರೆಯನುಡಿಸಿ ಪಲ್ಲಂ ಸುಲಿಸಿ
ಕೊರಳಲಿಸ ಬರಿಯ ಸೆಜ್ಜೆಯನಳವಡಿಸಿ
ಅದರಲ್ಲಿ ಮೃದುವಸ್ತ್ರಂಗಳಂ ಸುತ್ತಿ ತೊಳೆದು ಕಾಲ್ಗಳನಿಂತು
ಜಂಗಮಕಳವಡುವ ಲಾಂಛನವನೇರಿಸಿ
ಹಲಬರಚ್ಚರಿವಡುತ ಪುರದೊಳು ನೋಡುತಿರಲಾಗಿ (ಸಂ. ೩೭, ೧೫)

ಪರಪೀಡೆಯನ್ನೇ ಆಟ ಮಾಡಿಕೊಂಡಿದ್ದ ಆ ಸುಜನೋಪದ್ರವಿಗಳು ದಸರಯ್ಯನ ಸತ್ವ ಪರೀಕ್ಷೆಗಾಗಿ ಆ ಮೋಟ ಮಲ್ಲುಗನನ್ನು ಹುರಿದುಂಬಿಸಿದರು. ಅವನೂ ಆನಂದದಿಂದ ಒಪ್ಪಿಕೊಂಡ. ಕೈ ಕಡಿಸಿಕೊಂಡ ಶಿಕ್ಷೆಗೊಳಗಾಗಿದ್ದರೂ ಅವನ ಮನಕ್ಕೆ ಬೆಳೆದಿದ್ದ ಪಾಪದ ಕೈಗಳಿನ್ನೂ ಮೊಂಡಾಗಿರಲಿಲ್ಲ. ಆ ಕಿಡಿಗೇಡಿಗಳೆಲ್ಲ ಸೇರಿ ಮೋಟ ಮಲ್ಲುಗನ ಮಂಡೆ ಬೋಳಿಸಿ, ಅವನಿಗೆ ಕಾವಿ ತೊಡಿಸಿದರು. ಭಸ್ಮ ಬಳಿದರು, ರುದ್ರಾಕ್ಷಿ ಸರ ಹಾಕಿ ಸುಳ್ಳು ಸನ್ಯಾಸಿಯನ್ನಾಗಿ ಮಾಡಿದರು. ಬರಿದಾದ ಸೆಜ್ಜೆ/ಲಿಂಗವಿಡುವ ಕರಡಿಗೆಯನ್ನು ಮೃದುವಾದ ವಸ್ತ್ರಗಳಿಂದ ಸುತ್ತಿ ಕೊರಳಿಗೆ ಕಟ್ಟಿ ಕಪಟ ಜಂಗಮನನ್ನಾಗಿ ಮಾಡಿ ದಸರಯ್ಯನನ್ನು ನಿನ್ನ ಮೋಟು ಕೈಗಳಿಂದ ಕಠಿಣ ವೇಗದಲ್ಲಿ ತಿವಿ, ಮರಳಿತಿವಿ ನೀ ಅಂಜಬೇಡ ಎಂದು ಮೋಟು ಮಲ್ಲುಗನನ್ನು ಪ್ರಚೋದಿಸಿ ಮಲಿನಮತಿಗಳು ಕಳಿಸಿದರು.

ದಸರಯ್ಯನ ಬಳಿಗೆ ಬಂದ ಆ ದುಷ್ಪೀಡಿತನು "ಎಲೆಲೆ ಎನ್ನ ಮೋಟಮಲ್ಲಿದೇವಯ್ಯನೆಂಬರಲಾ ಇಳೆಯೋಳರಿಯಾ ಎನ್ನ ಹೆಸರನು ಎಂದು ಹೇಳುತ್ತಾ ಪರ್ವತ ಮಲ್ಲಿನಾಥನ ಸುತ ನಾನು ಊರ್ಧ್ವರೆಯೋಳ್ ಕಿರಿಯನಲ್ತು ನಾನು, ನಿನಗೆಂತುಂಟು ಗರ್ವಂ, ನುಡಿಯದೆ ಪೋದಪೆ ಎಂದು ತಾನು ಜಂಗಮನಾದರೂ ತನ್ನನ್ನು ಸರಿಯಾಗಿ ಸ್ವಾಗತಿಸಿಲ್ಲವೆಂದು ಆಕ್ಷೇಪಿಸಿ, ನನ್ನನ್ನು ನೋಡದ ಹಿರಿಯತನ ಉಳಿಯಿತೆ? ಶರಣನಾದ ನೀನು ಅಭಿಮಾನ್ಯ ಶೂನ್ಯ, ನುಡಿದಡೆ ನಿನ್ನ ಮಹತ್ವವಂ ಕೆಡಗುಮೆ? ಮಣಿದೊಡೆ ನಿನ್ನಯ ಮುಳ ಭಕ್ತಿ ಹಾರಿಯಕ್ಕುಮೆ? ಚರಮೂರ್ತಿಯಾದ ನಿನ್ನಂ ಕರೆಯುತ್ತಿರೆ ಕೇಳದಂತೆ ತಲರ್ದಮೆ? ನಿನ್ನ ನೋಟಕ್ಕೆ ನಾವು ಜಂಗಮವಲ್ಲವೇ ಹೇಳಾ! ಎಂದು ದಟ್ಟಿಸಿ ನುಡಿವನು, ಅಲ್ಲದೆ "ನೀನು ಚರಭಕ್ತಿಯುತನ್ ಅಹಿಂಸಾ ಪರನ್ ಅಧಿಕ ದಯಾಳು ಧಾರ್ಮಿಕನು ಎಂದು ಕೇಳಿ ನಿನ್ನ ಬಳಿ ಬಂದುದಕ್ಕೆ ಸಾರ್ಥಕವಾಯಿತು ಎಂದು ಹಂಗಿಸುವನು. ಎಮ್ಮ ಲಘುವ ಮಾಡಿದೆ ಸೈಯಾ ತಾಪಸೆರೆಯೋಳ್ ಎಂದು ಆಕ್ಷೇಪಿಸಿ ಒಡೆಯರಿರುವ ಕಡೆ ಮೃಢ ಭಕ್ತರು ಹೋಗಿ ನಮಿಸುವುದು ಸಮ, ನಿನಿದ್ದುದೆಡೆಗೆ ನಾನು ಬಂದರೂ ನೀನು ಸುಮ್ಮನಿರುವುದೇ? ಎಂದು ಕೆಣಕಿ ಮದವೋ? ಮರುಳ್ತನವೋ? ನಿನಗಿದು ಎಂದು ಮೋಟು ಮಲ್ಲುಗ ದಸರಯ್ಯನನ್ನು ವಿಡಂಬಿಸುವನು.

ತನ್ನನ್ನು ಬಗೆಬಗೆಯಲ್ಲಿ ಆಕ್ಷೇಪಿಸಿದ ಶಿವ ಲಾಂಛನಧಾರಿಯಾದ ಮೋಟಮಲ್ಲನನ್ನು ಕಂಡು ದಸರಯ್ಯ ಮರುಳನೀವನ್ ಎನ್ನಲಿಲ್ಲ ದುರಾತ್ಮನೆಂದು ಬಗೆಯಲಿಲ್ಲ, ಕಳ್ಳನೆಂದು ಓಸರಿಸಲಿಲ್ಲ. ಕುಹಕ ವೇಷಧಾರಿ ಮಧಾಂದನೆಂದು ನೋಡಲಿಲ್ಲ. ತಸ್ಕರಿಚರಿತ ಕಪಟಿ ಎಂದು ಉಪೇಕ್ಷಿಸಲಿಲ್ಲ ಶಂಕರ ಲಾಂಛನದಾರಂ ಭಾಸುರ ಜಂಗಮನೆಂದು ಭಕ್ತಿಯಿಂದ ಭಾವಿಸಿದನು ಆತನನ್ನು ಸಾಕ್ಷಾತ್ ಶಿವನೆಂದೇ ಭಾವಿಸಿ, ವಿಶ್ವಾಸವೇ ತನ್ನ ನಿಜ ಪ್ರಾಣವಾಗಿ ಭಯಭಕ್ತಿಯಿಂದ ತನ್ನ ತಪ್ಪನ್ನು ಮನ್ನಿಸಬೇಕೆಂದು ಮೋಟು ಮಲ್ಲುಗನ ಪಾದದಲ್ಲಿ ಬಿದ್ದು ಬೇಡಿಕೊಳ್ಳುವನು.

"ನರ ಚರ್ಮಾಮೃತ ಮಹಾದೇವ ನನ್ನಲ್ಲಿ ಸಾವಿರಾರು ದುರ್ಗಣಗಳಿವೆ ಮನ್ನಿಸಿ ಕಾಪಾಡು. ಹರನಾವತಾರ ಚಿತ್ತೈಸು ಎಂದು ಕಾಲಿಗೆರಗುತ್ತಾನೆ. ಆಗ ಮೋಟಮಲ್ಲನು ತನ್ನ ಮೋಟು ಕೈಗಳಿಂದಲೇ ನಿಷ್ಠೂರವಾಗಿ ದಸರಯ್ಯನ ತಲೆಯನ್ನು ತಿವಿಯುತ್ತಾ ಒಡನೊಡನೆ ಬಡಿಬಡಿದು ಪೊಡೆಪೊಡೆದಡಿಗಿಟ್ಟನು. ಖಾಸಾಮನೆಯಂಗೀಲ್ದು ಬೊಬ್ಬೆಗಳುಂಟಾಗಿ ಮತ್ತವು ಒಡೆದು ರಕ್ತ ಜೋರ್‍ರನೆ ಸುರಿಯುತ್ತಿರುವಾಗಲೂ ಈ ದಯಾನಿಧಿ ದಸರಯ್ಯ ನೊಂದೆ ಎನ್ನಲಿಲ್ಲ. ಆಣೆಯಿಟ್ಟು ಆ ಮೋಟು ಮಲ್ಲುಗನ ಒಡೆತವನ್ನು ತಪ್ಪಿಸಿಕೊಳ್ಳಲಿಲ್ಲ. ನಿರಪರಾಧಿಯನ್ನು ಬನ್ನಬಡೆಸುದುಚಿತವೇ ಹೇಳು? ಎಂದು ಅಳುಕದೆ, ಬಳುಕದೆ, ಅಕಟೇನ್ನದೆ, ಒದರದೆ ನಿಶ್ಚಲ ನಿಶ್ಚಿಂತನಾಗಿದ್ದನು. ನನ್ನಲ್ಲಿ ಏನೋ ತಪ್ಪ ಕಂಡೇ ಈತನ ರೂಪದಲ್ಲಿ ಶಿವನೆ ಶಿಕ್ಷಿಸಿದ್ದಾನೆಂದು ತಿಳಿಯುವನು. ಅಲ್ಲದೆ ಮಡಕೆ ಕೊಳ್ಳುವವರು ಅದನ್ನು ಬಡಿದು ನೋಡಿದ ನಂತರ ಚೆನ್ನಾಗಿದ್ದರೆ ಕೊಳ್ಳುವರು. ಹಾಗೆಯೇ ತನ್ನನ್ನು ಸ್ವೀಕರಿಸುವ ಮೊದಲು ದೇವರು ಪರೀಕ್ಷಿಸುತ್ತಿದ್ದಾನೆಂದು ಭಾವಿಸುವನು. ಇದನ್ನು ಭೀಮಕವಿಯು ತನ್ನ ಬಸವಪುರಾಣದಲ್ಲಿ ಬಹು ಸೊಗಸಾಗಿ ಬಣ್ಣಿಸಿದ್ದಾನೆ.

ತನ್ನನ್ನು ಮೋಟು ಮಲ್ಲುಗ ಬಡಿಯುವುದು ತನ್ನ ಪೂರ್ವಕರ್ಮವನ್ನು ಪರಿಹರಿಸಲು ಮತ್ತು ಭವಬಂಧನ ಮುಕ್ತನನ್ನಾಗಿ ಮಾಡಲು ಎಂದೇ ದಸರಯ್ಯ ಅಂದುಕೊಳ್ಳುತ್ತಾನಷ್ಟೇ ಅಲ್ಲದೆ ತನ್ನ ಶಿರಾ ಬಹಳ ಕಠಿಣವಾಗಿದ್ದೂ ಒಡೆಯುತ್ತಿರುವ ಮೋಟು ಮಲ್ಲುಗನ ಮೃದು ಕರತಲದೀತನಿಗೆ ನೋವಾಗುತ್ತದೆಂದು ಚಿಂತಿಸುತ್ತಾ ಅಯ್ಯನುಜ್ವಲ ಮೃದುಪಾಣಿಪದ್ಮಮ್ಮಿತುಂಟು ಇದು ಲಿಂಗ ಜಂಗಮಕೆ ನಾನು ಎರಗಿದಿದ್ದಲ್ಲಿ ತನ್ನನ್ನು ಒಡೆಯುವ ಈತನ ಕೈ ಪುಷ್ಪದಂತೆ ಮೃದುವಾಗಲಿ ಎಂದು ಹಾರೈಸುತ್ತಾನೆ. ಅಷ್ಟೇಯಲ್ಲ, ಎನ್ನ ಮೈಯೋಳ್ ಮೃದುವಪ್ಪಡೆಯ ಪಡೆ ನೀ. ನಿನ್ನ ಶತಮಲ ಕರಯುಗಳ ನೊಂದುದುಗಡಾ ಎಂದೇಳಿ ನಿನ್ನ ಕೈಗಳು ನೊಂದು ಬಳಲಿದೆ ಎಂದು ಆ ಮೋಟು ಮಲ್ಲುಗನ ಕೈಗಳನ್ನು ಹಿಡಿದು ಅನುನಯದಿಂದ ಒಯ್ಯನೊಯ್ಯನೆ ಹೊತ್ತುತ್ತಿರಲು ಕಡಿದಿರುವೆರಡು ಮೋಟು ಕೈಗಳು ಮೊಳೆತು ಮೊಳೆದಳವೇರಿ ನಿಮಿರ್ದವು. ವೀರ ದಸರಯ್ಯನ ಆಚಾರಕ್ಕೆ ಕೋಡು ಮೂಡುವಂತೆ ದಸರಯ್ಯನ ಶಿರಸ್ಸಂಬ ಕಾಮಧೇನು ಕರದ ಕರುಗಳನ್ನು ಈಯ್ದಂತೆ ಆಯಿತು.

ಮೋಟುಕೈ ಮಲ್ಲಿನಾಥನಿಗೆ ಮೂಡಿದ ಕೈಗಳು ದಯಾರಸನಿಧಿಯಾದ ದಸರಯ್ಯನೆಂಬ ಶಾಂತಸಾಗರದಲ್ಲಿ ಅರಳಿದ ಕೆಂದಾವರೆಗಳಂತೆ ರಾರಾಜಿಸಿದವು. ಅಲ್ಲದೆ ಅವನ ಕರಸ್ಪರ್ಶದಿಂದ ಮಲ್ಲಿನಾಥನ ಕೊರಳಲ್ಲಿದ್ದ ಬರಿ ಸಜ್ಜೆಯು ಲಿಂಗವ ಧರಿಸಿತು. ತನಗೆ ಇಲ್ಲವಾಗಿದ್ದ ಕೈಗಳು ಮೂಡಿದ್ದು, ಬರಿಯ ಸಜ್ಜೆಯಲ್ಲಿ ಲಿಂಗ ಅವತರಿಸಿದ್ದನ್ನು ಕಂಡು ಮೋಟುಗೈಯವನಿಗೆ ಭಯ, ನಾಚಿಕೆಗಳು ಏಕಕಾಲದಲುಂಟಾಗಿ ತಲೆಯ ತಗ್ಗಿಸಿ ತನ್ನ ಉಂಗುಷ್ಟದಿಂದ ನೆಲವನ್ನು ಕೆರೆಯುತ್ತಾ ನಿಂತನು ದಸರಯ್ಯನ ಭಕ್ತಿ ವಿಲಾಸವನ್ನು ದೃಢಾಚಾರವನ್ನು ಮೆಚ್ಚಿ ಶರಣಾದಿಗಳು ದಸರಯ್ಯನನ್ನು ಮೆಚ್ಚಿ ಹೊಗಳಿತು.

ಮೋಟಗೈಯವನಿಗೆ ಕೈಗಳನ್ನು ಭರಿಸಿದ ದಸರಯ್ಯನ ತಲೆಯನ್ನು ಸಾಕ್ಷಾತ್ ಶಿವನ ಪವಿತ್ರವಾದ ಸಿರಿಮುಡಿಗೆ ಸಮಾನವೆಂದು ಶರಣರು ಕೀರ್ತಿಸಿದರೆಂಬ ಸಂದರ್ಭವನ್ನು ಭೀಮಕವಿಯು ತನ್ನ ಬಸವ ಪುರಾಣದಲ್ಲಿ ಹೇಳಿ ಸ್ತುತಿರುವ ವಚನ

ಸರಿಸಿಜಾತೋದ್ಭವನ ನಾಲ್ಕುಂ
ಗಿರಿಜೆಯಾತ್ಮಜನಾರು ದಶಕಂ
ಧರನ ಹತ್ತಹಿಪತಿಯ ಸಾವಿರ ತಲೆಗಳೆಣಿಸಲ್ಕೆ
ಸರಿಯೆ ನಿನ್ನಯ ತಲೆಯೊಡನೆ ಶಂಕರನ ತಲೆಯೇ ಸಮಾನವಲ್ಲದೆ
ಧರಣಿಯೊಳಗೀಶ್ವರನು ಗುರುವುಂ ಭಕ್ತನುಂ ನೀವೆ॥
ಉತ್ತಮೊತ್ತಮ ದಯಾಭರಿತನಾದ ದಸರಯ್ಯ ದೇವನನ್ನು ನಾಣ್ಮಿಡಿಕರಾದ ದುರ್ಜನರು ಕ್ಷಮಾಪಣೆ ಕೇಳುವರು.

ಈ ಸನ್ನಿವೇಶಕ್ಕೆ ಪೂರಕವಾಗಿ ತಿಳಿಯುವ ಮಾಹಿತಿಗಳೆಂದರೆ; ಮೋಟ ಮಲ್ಲುಗ ಬಂದು, ವಂದಿಸಿದ ದಸರಯ್ಯನನ್ನು ಕಾರಣವೇ ಇಲ್ಲದೆ ತನ್ನ ಮೋಟುಗೈಗಳಿಂದ ಗುದ್ದತೊಡಗಿದನು. ಆಗ ದಸರಯ್ಯನ ಅಹಿಂಸೆ ಅಗ್ನಿಪರೀಕ್ಷೆಗೆ ಗುರಿಯಾಯಿತು. ನಿಷ್ಕಾರಣವಾಗಿ ತನ್ನನ್ನು ಹಿಂಸಿಸತೊಡಗಿದ್ದ ಆ ದುಷ್ಟನನ್ನು ದಂಡಿಸುವುದು ಧರ್ಮವಲ್ಲವೇ? ಅಧರ್ಮಿಗಳೊಡನೆಯೂ ಹಿಂಸೆಯನ್ನು ಸಹಿಸಿಕೊಳ್ಳಬೇಕೆ? ಹಿಂಸಾಕರ್ಮವನ್ನೂ ಅಹಿಂಸೆಯಿಂದ ತಾಳಿಕೊಳ್ಳಬೇಕೆ? ಇತ್ಯಾದಿ ಪ್ರಶ್ನೆಗಳು ದಸರಯ್ಯನ ದಯಾಬುದ್ಧಿಯನ್ನೂ ಕೆಣಕಿ ಕಲಕಿರಬೇಕು. ಎಂಬುದನ್ನು ಸಾದರಪಡಿಸುವ ವಚನ;

"ಸರ್ವಜೀವ ನಿನ್ನ ದಾಹೆ ಎಂಬೆನೆ? ಅದು ಭಿನ್ನಭಾವ!
ತ್ರಿಗುಣಾತ್ಮಕರುಂಟು; ಅವರು ನಿನಗನ್ಯರೆಂಬೆನೆ?
ಆ ತ್ರಿಗುಣಾತ್ಮಕರೂ ನಿನ್ನ ತಿಲಾಂಶ!
ಇಂತೀ ಸರ್ವಭೂತಕ್ಕೆ ನಿನ್ನ ದಯೆ. ಎನಗಿದೇತಕ್ಕೆ
ಗೆಲ್ಲ ಸೋಲವೆಂಬ ಖುಲ್ಲತನ? ಎಲ್ಲ ಜೀವಕ್ಕೂ ಸರಿ, ಅದು
ಅರುಣೋದಯದಂತೆ! ಎನ್ನ ಚಿತ್ತದಲ್ಲಿ ಸರ್ವ ಜೀವಕ್ಕೆಲ್ಲಕ್ಕೂ
ದಯೆಯನೇ ಮಾಡು, ಚೆನ್ನ ದಸರೇಶ್ವರ ಲಿಂಗಾ!" (ವ.ಸಂ. ೨, ೮)

ಧನ್ಯ ದಸರಯ್ಯಾ! ನಿನ್ನಂಥ ಅಹಿಂಸಾ ಮೂರ್ತಿಗಳು ಶತಮಾನಕ್ಕೊಬ್ಬರು! ಜೀವಿಗಳೆಲ್ಲಾ ತ್ರಿಗುಣಾತ್ಮಕರು, ಆ ತ್ರಿಗುಣಾತ್ಮಕರೂ ಶಿವನ ತಿಲಾಂಶರೇ! ಅವರು ಅನ್ಯರೇ? ಮೋಟ ಮಲ್ಲುಗ ತ್ರಿಗುಣಗಳಲ್ಲೊಂದಾದ ತಾಮಸದಿಂದ ಈ ತಾಮಸೀ ಕೃತ್ಯ ನಡೆಸಿದ್ದಾನೆ. ಅವನು ಗೆದ್ದ, ನಾನು ಸೋತೆನೆಂಬ ಖುಲ್ಲತನ ನನಗೇಕೆ? ಸರ್ವ ಭೂತಗಳಿಗೂ ಶಿವನ ದಯೆ ಸಮಾನವಾಗಿದೆ. ಅದು ಅರುಣೋದಯದಂತೆ. ಪಾಪಿಗಳು ಪುಣ್ಯವಂತರೆನ್ನದೆ ಗುಡಿ, ಗುಡಿಸಲುಗಳೆನ್ನದೆ ಎಲ್ಲರ ಮೇಲೂ ತನ್ನ ಬಂಗಾರದ ಬೆಳಕನ್ನು ಚೆಲ್ಲುವ ಬಾಲ ದಿನಮಣಿಯಂತೆ ಶಿವನ ಕರುಣೆ. ಆದುದರಿಂದ ಶಿವನೇ ನನ್ನ ಚಿತ್ತದಲ್ಲಿ ಸರ್ವ ಜೀವಕ್ಕೆಲ್ಲ ದಯೆಯೊಂದೇ ಉಳಿಯುವಂತೆ ಅನುಗ್ರಹಿಸು! ಎಂದು ಮೋಟ ಮಲ್ಲುಗನಿಂದ ಮೈಎಲ್ಲವು ಮುರಿಯುವಂತೆ ಗುದ್ದಿಸಿಕೊಳ್ಳುತ್ತಿರುವಾಗಲೂ ಸಹಿಸಿಕೊಂಡ ದಸರಯ್ಯ. ಅಹಿಂಸೆಗೊಂದು ಹೆಸರಾಗಿ ಉಳಿದ.

ಉಸಿಕನಿರ್ದೊಡೆ ನೋಯದೆಕರ
ಬಿಸರುಹಂಗಳೆನುತ್ತವಾಲೋ
ಕಿಸುತ ಕುಟ್ಟಿಸಿಕೊಳುತ ನಯದಿಂ ಮತ್ತಿ ಹೊಡವಡುತ
ಮಿಸುಪ ತನುವಿನೊಳೆಯ್ದೆ ಮೃದುತರ
ದೆಸೆವ ಠಾವುಗಳಿರೆ ಕಪಾಲವ
ನಸಮನಯನ ಪ್ರತಿಮ ಕೈಗಳು ನೋಯೆ ತಿವಿದಪರೆ (ವ.ಸಂ. ೩೭, ೩೭)

ಹೊಡೆದು ಹೊಡೆದೂ ಸಾಕಾಗಿ ಸುಮ್ಮನಾದ ಮೋಟಮಲ್ಲಗ. ದಸರಯ್ಯ ಧಾವಿಸಿ "ಅಣ್ಣಾ, ನಿನ್ನ ಕೈಗಳೆಷ್ಟು ನೊಂದುವಲಾ! ಏಕೆ ಇಷ್ಟು ಬಳಲಿದೆ?" ಎನ್ನುತ್ತ ಅವನ ಕೈಗಳನ್ನೂ ಕಾಲುಗಳನ್ನೂ ಮೆತ್ತಗೆ ಒತ್ತತೊಡಗಿದನು. ಮೋಟಮಲ್ಲುಗನ ಕಲ್ಲೆದೆ ಕರಗಿ ಹರಿಯಿತು. ದಸರಯ್ಯನ ಕಾಲಿಗೆ ಬಿದ್ದು ಕ್ಷಮಿಸೆಂದು ಅಂಗಲಾಚಿದನು. ಕಪಟವೇಷದ ಜಂಗಮ, ನಿಜವಾದ ಜಂಗಮನಾಗಿ ಮಾರ್ಪಟ್ಟನು. ದಸರಯ್ಯನ ಕೀರ್ತಿ ದಶದಿಕ್ಕುಗಳಿಗೆ ಹರಡಿತು.

ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಶಿವನೇ ದಸರಯ್ಯನನ್ನು ಪರೀಕ್ಷಿಸಲು ಮೋಟ ಮಲ್ಲುಗನಾಗಿ ಬಂದು ಪರೀಕ್ಷಿಸಿ, ಅವನ ದಯಾಪರತೆಯನ್ನು ಕಂಡು ಮೆಚ್ಚಿ ಕೈವಲ್ಯವನ್ನು ದಯಪಾಲಿಸಿದನೆಂದು ಹೇಳಲಾಗಿದೆ.

ದಸರಯ್ಯನ ಪತ್ನಿ ವೀರಮ್ಮ. ವೀರಮ್ಮ ವಚನಗಳ ಅಂಕಿತನಾಮ 'ಗುರುಶಾಂತೇಶ್ವರಾ'. ಶರಣೆಯರೆಲ್ಲರೂ ಸಾಮಾನ್ಯವಾಗಿ ಪತಿಯ ಅಂಕಿತಕ್ಕೆ 'ಪ್ರಿಯ' ಶಬ್ದವನ್ನು ಸೇರಿಸಿಕೊಂಡಿದ್ದರೆ ವೀರಮ್ಮನ ವಚನಾಂಕಿತ ಮಾತ್ರ ಪತಿಯಾದ ದಸರಯ್ಯ ಮತ್ತು ಅತನ ದಸರೇಶ್ವರ ಲಿಂಗ ಎಂಬುದಕ್ಕೂ ಭಿನ್ನವಾದ ಅಂಕಿತವಾಗಿದೆ ಎಂದು ಹಲವರು ಹೇಳುತ್ತಾರೆ. ಆದರೆ ದಸರಯ್ಯನನ್ನು ಸಮಗ್ರವಾಗಿ ಅರ್ಥೈಸಿಕೊಂಡಾಗ ದಸರಯ್ಯ ತನ್ನ ಸಂಪೂರ್ಣ ಬದುಕಿನ ಎಂತಹ ಕಠಿಣ, ಕ್ಲಿಷ್ಟ ಸಂದರ್ಭಗಳಲ್ಲೂ ಸಮಾಧಾನಿಯಾಗಿ ಅಹಿಂಸೆಯನ್ನು ಪಾಲಿಸಿರುವುದು ಅರಿವಾಗುತ್ತದೆ. ಹಾಗಾಗಿ ಶರಣೆ ವೀರಮ್ಮನವರು ತಮ್ಮ ಪತಿ ದಸರಯ್ಯನವರು ಕರುಣೆ, ಶಾಂತಿ, ಕ್ಷಮೆ, ದಮೆ ಮೊದಲಾದವುಗಳಿಗೆ ಗುರುವಾಗಿರುವವರು ಎಂದು ಭಾವಿಸಿ ಪತಿಯ ಗುಣಸ್ವಭಾವಗಳಿಗನುಗುಣವಾಗಿ 'ಗುರುಶಾಂತೇಶ್ವರಾ' ಎಂದು ಇಟ್ಟುಕೊಂಡಿರಬಹುದು. ಇದಕ್ಕೆ ಪೂರಕವಾಗಿ ನೋಡಿದರೆ ಷಡಕ್ಷರದೇವ ತನ್ನ 'ವೃಷಭೇಂದ್ರ ವಿಜಯ'ದಲ್ಲಿ ದಸರಯ್ಯನನ್ನು ಕುರಿತು ಹೀಗೆ ಪ್ರಸ್ತಾಪಿಸಿದ್ದಾನೆ.

"ಪರರಂ ತನ್ನಂತೆನೋಳ್ಪಂ ಗಡ
ಪರರ ಮನಂ ನೋಯ್ವುವೆಂದಾಗಳುಂ ನಿಷ್ಠುರ ವಾಕ್ಪ್ರಲಾಪಮಂ
ತಾ ಮರೆದುಮುಸುರದಿರ್ಪ ಗಡಾ
ಸರ್ವ ಜಂತೂತ್ಕರಮೆಂತುಂ ನೋಯದಂತಾಚರಿಪ ಪರಮ ಶಾಂತಾಂ ಗಡಾ
ವೀರ ಮಾಹೇಶ್ವರರೊಳ್ಮುಖ್ಯಂ ಗಡೀತಂ ಪಿಡಿದ ಬತದ ಸಾಮರ್ಥ್ಯ ಮನ್ನೋಳ್ಪೆವೀಗಳ್॥"

ಪರರನ್ನು ತನ್ನಂತೆಯೇ ಎಂದು ಭಾವಿಸಿ ಅಪ್ಪಿತಪ್ಪಿಯೂ ನಿಷ್ಠುರ ಮಾತನ್ನಾಡದ ಸಕಲ ಜೀವಜಂತುಗಳನ್ನು ನೋಯಿಸದವನು ಅತ್ಯಂತ ದಯಾರಸಭರಿತನೂ, ಪರಮ ಶಾಂತನೂ ದಸರಯ್ಯನಲ್ಲವೆ? ಎಂದಿದ್ದಾರೆ. ಹಾಗಾಗಿ ಪತ್ನಿಯಾದ ವೀರಮ್ಮನ 'ಗುರುಶಾಂತೇಶ್ವರ' ವಚನಾಂಕಿತ ಪತಿಯ ಮತ್ತು ಪತಿಯ ಅಂಕಿತಕ್ಕೆ ಅನುಗುಣವಾಗಿಯೇ ಇದೆ. ದಯೆಗೆ ಅಸರನಾದವನು "ದಸರಯ್ಯ ಹಾಗೂ ಆತನ ಅಂಕಿತನಾಮ ದಸರೇಶ್ವರಲಿಂಗ" ಆಗಿರುವಾಗ 'ಶಾಂತೇಶ್ವರ' ಎಂಬುದು ಭಿನ್ನವೆನ್ನಲು, ಬೇರೆ ಎನ್ನಲು ಹೇಗೆ ಸಾಧ್ಯ. ದಯೆ ಮತ್ತು ಶಾಂತ ಎಂಬರ್ಥಗಳು ಪರಸ್ಪರ ಪೂರಕವಲ್ಲವೆ? ಅಲ್ಲದೆ ದಸರಯ್ಯ-ವೀರಮ್ಮ ದಂಪತಿಗಳು ಲೌಕಿಕದಲ್ಲಿ ನಿರ್ಮಲ ಜೀವನ ನಡೆಸಿ, ನಿರ್ವಯಲಾದರು: ಅಲ್ಲದೆ ಪರಮಾರ್ಥಕ್ಕೊಲಿದ ಸತಿ-ಪತಿಗಳಾಗಿ ಪಾರಮಾರ್ಥಕ್ಕೆ ಪರಸ್ಪರರು ಅನುಕೂಲರಾಗಿ ಶರಣರ ತಾರಾಗಣದಲ್ಲಿ ತೊಳಗಿ ಬೆಳಗುವ ತಾರೆಗಳಂತೆ ಆದರ್ಶಪ್ರಾಯರಾದವರು. ಪತ್ನಿಯರ ಅಂಕಿತನಾಮಗಳೆಲ್ಲಾ ಪತಿಗೆ ಅನ್ವಯಿಸುವಂತಿರಬೇಂಬ ನಿಲುವು ಅಂದಿನದೂ ಅಲ್ಲ ಮತ್ತು ಇಂದಿನದೂ ಅಲ್ಲ. ಆ ಕಾಲಮಾನದಲ್ಲಿಯೂ ಶರಣ ಸತಿ-ಪತಿಗಳ ಅಂಕಿತನಾಮಗಳಲ್ಲಿ ಸಾಮ್ಯತೆ, ಭಿನ್ನತೆಗಳಿದ್ದವು. ಒಂದೇ ಆಗಿರಬೇಕೆಂಬುದೆನೂ ಇಲ್ಲ. ಆದರೆ ದಸರಯ್ಯ ಮತ್ತು ವೀರಮ್ಮನ ಅಂಕಿತನಾಮಗಳು ಬೇರೆ ಬೇರೆಯಾಗಿದೆ ಎಂಬ ಉಲ್ಲೇಖಗಳು ಈವರೆಗಿನ ಎಲ್ಲಾ ಕೃತಿಗಳಲ್ಲೂ, ಉಪನ್ಯಾಸಗಳಲ್ಲೂ ಪ್ರಸ್ತಾಪಿತವಾಗಿದೆ. ಆದರೆ ಪರಸ್ಪರ ಪೂರಕವಾಗಿವೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ.

> "ಎಲ್ಲವನರಿವಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು
> ಬೇಧ ಉಂಟೆ! ಶಾಸ್ತ್ರವೆಲ್ಲ ಕಲಿತಲ್ಲಿ ಗೆಲ್ಲಸೋಲಕ್ಕೆ
> ಹೊರಬೇಕೆಂಬುದು ಕಡೆಯಲ್ಲಿ ಒಂದು ಸೊಲ್ಲುಂಟೆ?
> ಪುರಾಣವನೆಲ್ಲವ ನೋಡಿದಲ್ಲಿ ಸರ್ವಜೀವನ
> ಕೊಲ್ಲು, ಕೊರೆ- ಎಂಬುದೊಂದು ದಳ್ಳುರಿಯುಂಟೆ?
> ಶ್ರುತಿಯ ಕೇಳುವಲ್ಲಿ, ಸ್ಮೃತಿಯನಂಗೀಕರಿಸುವಲ್ಲಿ,
> ಸರ್ವಹತವ ಮಾಡಬೇಕೆಂಬುದೊಂದು ಗತಿಯುಂಟೆ?
> ಇಂತೀ ಆತ್ಮನಲ್ಲಿ ಸರ್ವಭೂತ ಹಿತವುಳ್ಳವಂಗೆ ಆತ ಅತೀತ
> ಸ್ವಯವಸ್ತು ದಸರೇಶ್ವರ ಲಿಂಗವು!" (ವ.ಸಂ. ೨, ೨)

ವೇದ, ಶಾಸ್ತ್ರ, ಪುರಾಣ, ಆಗಮ, ಸ್ಮೃತಿ ಮೊದಲಾದವುಗಳೆಲ್ಲಾ ಸಾಮರಸ್ಯ, ಸಹಜೀವನ ಇತ್ಯಾದಿಗಳನ್ನೇಲ್ಲಾ ಬೋಧಿಸಿದರೂ ಅಂತಿಮವಾಗಿ ನ್ಯಾಯ ಧರ್ಮಗಳು ಉಳಿಯಬೇಕಾದರೆ ಅನ್ಯಾಯ ಅಧರ್ಮಗಳು ಅಳಿಯಲೇಬೇಕು. ಧರ್ಮ ಸಂಸ್ಥಾಪನೆಗಾಗಿ ಯುಗ ಯುಗಗಳಲ್ಲೂ ತಾನು ಮತ್ತೆ ಮತ್ತೆ ಹುಟ್ಟಿಬರುತ್ತಲೆ ಇರುತ್ತೇನೆಂದು ಸತಃ ಶ್ರೀಕೃಷ್ಣನೇ ಹಿಂದೂಗಳ ಪವಿತ್ರ ಗ್ರಂಥ 'ಭಗವದ್ಗೀತೆ'ಯಲ್ಲಿ ಹೇಳಿರುವುದು ಹಾಗೆಯೇ ಹದಿನೆಂಟು ದಿನಗಳ ಕುರುಕ್ಷೇತ್ರ ಯುದ್ಧದಲ್ಲಿ ತಾನೆ ಮುಂದಾಳತ್ವವನ್ನು ವಹಿಸಿ ಕೌರವರ ಕಡೆಯ ಹನ್ನೊಂದು ಅಕ್ಷೋಯಿನಿ ಸೈನ್ಯ ಪಾಂಡವರ ಕಡೆ ಏಳು ಅಕ್ಷೋಯಿನಿ ಸೈನ್ಯ ವಿನಾಶಕ್ಕೆ ಸಾಕ್ಷೀಭೂತನಾದ ಶ್ರೀಕೃಷ್ಣನ ಸಂದರ್ಭವನ್ನು, ಒಂದು ಮತ್ತು ಎರಡನೇ ಮಹಾಯುದ್ಧಗಳ ಸಂದರ್ಭ, ಸನ್ನಿವೇಶಗಳಲ್ಲಿ ಹಿಂಸೆಯನ್ನು ನಾವೆಲ್ಲಾ ಸಮರ್ಥಿಕೊಳ್ಳುತ್ತೇವೆ. ಆದರೆ ದಸರಯ್ಯ ಮಾತ್ರ ಯಾವುದೇ ಕಾರಣಕ್ಕೂ, ಯಾವುದೇ ಸಂದರ್ಭದಲ್ಲೂ ಕಾಯ-ವಾಚ-ಮನಸ್ಸಾ ಯಾವ ಹಿಂಸೆಗಳನ್ನು ಒಪ್ಪುತ್ತಿರಲಿಲ್ಲ ಎಂಬುದನ್ನು ಈ ವಚನ ಸ್ಪಷ್ಟಪಡಿಸುತ್ತದೆ.

ದಸರಯ್ಯನ ಕೀರ್ತಿ ದಶದಿಕ್ಕುಗಳಿಗೆ ಹರಡಿತು. ಈ ಸುದ್ದಿಯನ್ನು ಕೇಳಿದ ಬಸವಣ್ಣವರು ಉತ್ಸಾಹದಿಂದ ಸದ್ಭಕ್ತ ಸಂದೋಹದಿಂದೊಡಗೂಡಿ ಬಂದು, ಆತನಿಗೆ ಪ್ರಣಾಮ ಮಾಡಿ, ಆನಂದಬಾಷ್ಪವನ್ನು ಸುರಿಸುತ್ತಾ ಅವನ ಅಮಳ ಕಾರುಣ್ಯವನ್ನು ಹೀಗೆ ಕೊಂಡಾಡುವರು.

> "ಸರ್ವದಯಾಪರ ನಿನ್ನಯ
> ಪರ್ವಿದ ಮಹಿಮಾತಿಶಯವನರಿವಂ ಜಗದೊ
> ಳ್ಸರ್ವಜ್ಞ ನೊರ್ವನಲ್ಲದೆ
> ದುರ್ವಾರ ಮದಾಂಧಮತಿಗಳಾವರಿದಪವೆ?"

ಹತ್ತಾರು ದಿಕ್ಕುಗಳಿಗೂ ದಸರಯ್ಯನ ಅಹಿಂಸಾ ಪ್ರವೃತ್ತಿಯನ್ನು ಪ್ರಶಂಸುತ್ತಾ ಬಸವಣ್ಣ ತಮ್ಮನ್ನು ಸೇರಿದಂತೆ ಅಹಂಕಾರ, ಕಂದಾಚಾರ ಮೊದಲಾದ ಸಂಕುಚಿತ ಸ್ವಾಭಾದ ಸಾಮಾನ್ಯ ಜನರಿಗೆ ದಸರಯ್ಯನ ಅಹಿಂಸಾ ಬದ್ಧತೆ ಪಾಲಿಸುವುದಿರಲಿ ಅರ್ಥಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ ಸರ್ವಜ್ಞಾನಿಯಾದ ಸರ್ವಜ್ಞನೊಬನಿಗೆ ಮಾತ್ರ ಅರ್ಥೈಸಿಕೊಳ್ಳಲು ಸಾಧ್ಯವೆಂದಿದ್ದಾರೆ.

'ಸಸ್ಯಗಳಿಗೂ ಜೀವವಿದೆ' ಎಂದು ಜಗದೀಶ ಚಂದ್ರಭೋಸರು ಆಧುನಿಕ ಯುಗದಲ್ಲಿ ಕಂಡು ಹಿಡಿದರೆಂದು ನಾವು ಹೇಳುತ್ತೇವೆ. ಆದರೆ ಹನ್ನೆರಡನೇ ಶತಮಾನದಲ್ಲೇ ಶರಣರಿಗೆ ಆ ಕಲ್ಪನೆ ಇತ್ತೆಂಬುದನ್ನು, ಅವರಿಗಿದ್ದ ಪರಿಸರ ಪ್ರೇಮವನ್ನು ಗಮನಿಸಿದರೆ ಆಶ್ಚರ್ಯವೆನಿಸುತ್ತದೆ.

ಸಕಲ ಜೀವಾತ್ಮರಿಗೆ ಲೇಸನೆ ಬಯಸುವುದು ಶರಣಧರ್ಮದ ಸುವರ್ಣಸೂತ್ರ. ಈ ಸೂತ್ರವನ್ನು ಎಲ್ಲ ಶಿವಶರಣರು ಅನುಸರಿಸಿ ನಡೆದಿದ್ದಾರೆ. ದಸರಯ್ಯನಂತೂ ಈ ಸುವರ್ಣ ಸೂತ್ರಕ್ಕೆ ತನ್ನ ಬಾಳಿನಿಂದಲೇ ಭಾಷ್ಯ ಬರೆದಿದ್ದಾನೆ.

ಹೀಗೆ ಅಹಿಂಸೆ ಪರಮಧರ್ಮ ಎಂಬುದು ಪ್ರತಿಯೊಬ್ಬ ಮನುಷ್ಯನ ತಿಳುವಳಿಕೆಯಲ್ಲಿದ್ದರೂ ಬದುಕಿನಲ್ಲಿ ಬಾಳುವುದು ಕಡುಕಷ್ಟ. ಹಿಂಸೆ ದೈಹಿಕ, ಮಾನಸಿಕ, ಭಾವನಾತ್ಮಕತೆಗಳಿಗೂ ಸಂಬಂಧಿಸಿದುದಾದರೂ ದೈಹಿಕ ಹಿಂಸೆಯ ಕ್ರೌರ್ಯ ಶಾಬ್ದಿಕ ಅಬ್ಬರದಂತೆ. ಆದರೆ ಮಾನಸಿಕ ಹಾಗೂ ಭಾವನಾತ್ಮಕ ಹಿಂಸೆಗಳು ರಣಮೌನದ್ದಾಗಿರುತ್ತದೆ. ಹಾಗಾಗಿಯೇ ಜೈನ ಮತ್ತು ವೀರಶೈವ ಧರ್ಮಗಳು ಸೇರಿದಂತೆ ಜಗತ್ತಿನ ಎಲ್ಲ ಧರ್ಮಗಳು ಹಿಂಸೆಯನ್ನು ವಿರೋಧಿಸಿ ಜೀವ ದಯೆಯನ್ನು, ದಯೆಯೇ ಧರ್ಮದ ಮೂಲವೆಂಬುದನ್ನು ಪ್ರತಿಪಾದಿಸುತ್ತವೆ.

**ಆಕರಗಳು**


೧. ಶರಣ ಕಥಾ ಮಾಲೆ – ೭, ದಸರಯ್ಯ-ಬ್ಯಾಡನೂರ ಶಾಂತವೀರಪ್ಪ, ಬಸವಸಮಿತಿ.

೨. ಶರಣರ ಅಹಿಂಸೆಯ ಸಂದೇಶ, ಪೂಜ್ಯಶ್ರೀ ಬಸವಗೀತಾ ತಾಯಿಯವರ ಪ್ರವಚನ, ಯೂಟುಬ್, ಕುಂದನ್ ಟಿವಿ

೩. ವಚನ ಶ್ರಾವಣ ೨೭, ದಯಾಮೂರ್ತಿ ದಸರಯ್ಯ, ಜಿ.ಪಿ.ಮರಿಸ್ವಾಮಿ ಗೋಡೆಕೆರೆ, ನ್ಯಾಯವಾದಿಗಳು, ವಚನಜ್ಯೋತಿ ಬಳಗ, ಯೂಟುಬ್.

೪. ಜೈನಧರ್ಮ ಮತ್ತು ಅಹಿಂಸೆ: ಡಾ.ಎಮ್.ಎಸ್.ಪದ್ಮಾ ಭಾಷಣ, ಧರ್ಮಸ್ಥಳ ಲಕ್ಷ ದೀಪೋತ್ಸವ ೪-೧೨-೨೦೨೧. ಯೂಟುಬ್.

೫. ಬಸವ ಸಮಿತಿ ಆನ್ಲೈನ್ ಅರಿವಿನ ಮನೆ, ೧೪-೫-೨೦೨೨ಮ "ಸಕಲ ಜೀವ ದಯಾಪರ ಶರಣ ದಸರಯ್ಯ" ಉಪನ್ಯಾಸಕರು: ಪ್ರೊ.ಜಿ.ಎ.ತಿಗಡಿ, ನಿವೃತ್ತ ಪ್ರಾಚಾರ್ಯರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಧಾರವಾಡ.